ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಕ್ಷೇತ್ರ ಪುನರ್‌ವಿಂಗಡಣೆ ಮಸೂದೆ ಹಾಗೂ ಮಹಿಳಾ ಮೀಸಲಾತಿ ವಿಧೇಯಕ ಜಾರಿಗೆ ಶಿರೋಮಣಿ ಅಕಾಲಿದಳ (ಎಸ್‌ಎಡಿ) ಬಹಿರಂಗ ಬೆಂಬಲ ಘೋಷಿಸಿದೆ.


09 ಆಗಸ್ಟ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -149 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಬ್ರೆಜಿಲ್‌ನ ಕಾಡಿನಲ್ಲಿ ಲಕ್ಷ ವೀರಪ್ಪನ್‌ಗಳಿದ್ದಾರೆ » 2


ಮಧ್ಯರಾತ್ರಿಯ ಮಕ್ಕಳ ಮಕ್ಕಳ ಮೊಮ್ಮಕ್ಕಳು! » 3


ಮಲೆನಾಡಿಗರ ನಿದ್ದೆಗೆಡಿಸಿದ ಒಂಟಿಸಲಗ » 4


# ಅಸಮಾಧಾನಿತರಿಗೆ ಜೆಡಿಎಸ್ ಬಾಗಿಲು ತೆರೆದಿದೆ

## ಕಾಂಗ್ರೆಸ್ ಶಾಸಕರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಹಿರಂಗ ಆಹ್ವಾನ

• ಪ್ರಜೋದಯ ವರದಿ

**ಹೊಳೆನರಸೀಪುರ:** ಕಾಂಗ್ರೆಸ್ ಪಕ್ಷದಲ್ಲಿರುವ ಅಸಮಾಧಾ ನಿತ ಶಾಸಕರಿಗೆ ಜೆಡಿಎಸ್ ಪಕ್ಷದ ಬಾಗಿಲು ತೆರೆದಿದೆ. ನೊಂದವರಿಗೆ, ನೋವಿನಲ್ಲಿರುವವರಿಗೆ ಮುಂದಿನ ದಿನಗಳಲ್ಲಿ ಪರಿಹಾರ ನೀಡುವ ಕೆಲಸವನ್ನು ಜೆಡಿಎಸ್ ಮಾಡಲಿದೆ ಎಂದು ಹೇಳುವ ಮೂಲಕ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಅತೃಪ್ತ ಶಾಸಕರಿಗೆ ಬಹಿರಂಗ ಆಹ್ವಾನ ನೀಡಿದರು.

ಶನಿವಾರ ದಿ||ಚನ್ನಮ್ಮ ಅವರ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸ್ಥಾನ ಸಿಗದ ಕಾಂಗ್ರೆಸ್‌ನ ಹಲವು ಶಾಸಕರು ನೋವಿನಲ್ಲಿದ್ದಾರೆ. ಅವರಿಗೆ ಮಾತು ಕೊಟ್ಟಂತೆ ನಡೆದು ಕೊಂಡಿಲ್ಲ ಎಂದು ಕೆಲವರು ನೋವು ತೋಡಿಕೊಂಡಿರುವುದನ್ನು ಗಮನಿಸಿದ್ದೇನೆ. ಎಲ್ಲಾ ರೀತಿಯ ಸಹಕಾರ ನೀಡಲು ಸಿದ್ಧರಿರುವ ಹಾಗು ಮುಕ್ತ ಮನಸ್ಸಿನಿಂದ ಜೆಡಿಎಸ್‌ಗೆ ಬರುವವರಿಗೆ ಆಹ್ವಾನ ನೀಡಲು ಸಿದ್ಧನಿದ್ದೇನೆಂದು ಹೇಳಿದರು.

ಜೆಡಿಎಸ್ ಪಕ್ಷದ ಬಾಗಿಲು ತೆರೆದಿರುವುದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ರಾಜ್ಯದ ಪರಿಸ್ಥಿತಿ ಬದಲಾಗಬೇಕಾದ ಅಗತ್ಯವಿದೆ. ರಾಜ್ಯದಲ್ಲಿ ಇಂತಹ ಪರಿಸ್ಥಿತಿಯನ್ನು ಹೋಗಲಾಡಿಸಿ ಉತ್ತಮ ಕೆಲಸ ಮಾಡುವ ಸರ್ಕಾರ ಬರಬೇಕು. ಜನಪರವಾದ ತೀರ್ಮಾನ ಕೈಗೊಳ್ಳುವಂತಹ ಶಕ್ತಿ ಬೆಳೆಯಬೇಕು. ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್‌ನೊಳಗಿನ ಆಂತರಿಕ ವಿಶ್ವಾಸದ ಕೊರತೆ ಮತ್ತಷ್ಟು ಬಹಿರಂಗವಾಗಲಿದೆ. ಅಲ್ಲಿ ಉತ್ತಮವಾಗಿ ಕೆಲಸ ಮಾಡುವವರಿದ್ದಾರೆ. ಆದರೆ, ವಿಧಿಯಿಲ್ಲದೆ ಅಥವಾ ಅನಿವಾರ್ಯವಾಗಿ ಅಂತಹವರು ಮುಂದಿನ ದಿನಗಳಲ್ಲಿ ಆ ಪಕ್ಷ ತೊರೆಯುವುದು ದೂರವಿಲ್ಲ. ಅದನ್ನು ಕಾಲವೇ ನಿರ್ಧರಿಸಲಿದೆ ಎಂದು ಹೇಳಿದರು.



**ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದಾರೆ**

ಕಾಂಗ್ರೆಸ್ ಪಕ್ಷದಲ್ಲಿರುವ ಕೆಲವು ಶಾಸಕರು ಪಕ್ಷದಲ್ಲಿ ಮುಂದುವರಿಯಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದಾರೆ. ಹಿರಿಯರು, ಕಿರಿಯರು ಎನ್ನುವುದಕ್ಕಿಂತ ಸಾರ್ವಜನಿಕವಾಗಿ ಭಯಭಕ್ತಿ ಇಟ್ಟುಕೊಂಡು ಜನರಿಗೆ ಗೌರವ ನೀಡುವ ಉತ್ತಮ ಶಾಸಕರು ಕಾಂಗ್ರೆಸ್‌ನಲ್ಲಿದ್ದಾರೆ. ಆದರೆ, ಪಕ್ಷ ನಿಷ್ಠೆ, ಬಲವಂತ ಅಥವಾ ಅನಿವಾರ್ಯತೆಯಿಂದಾಗಿ ಅವರು ಕಾಂಗ್ರೆಸ್‌ನಲ್ಲಿದ್ದಾರೆ ಎಂದರು.

> ಕೆ.ಎಂ.ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡಿರುವುದು ಸಂತೋಷ. ಹಾಸನಕ್ಕೂ ಒಂದು ಸಚಿವ ಸ್ಥಾನ ಕೊಟ್ಟಿದ್ದಾರೆ. ಅವರು ಒಳ್ಳೆಯ ಕೆಲಸ ಮಾಡಲಿ. ನಾವ್ಯಾಕೆ ಅಸೂಯೆ ಪಡಬೇಕು. ಜಿಲ್ಲೆಯ ಅಭಿವೃದ್ಧಿಗೆ ಸಚಿವರು ಉತ್ತಮವಾಗಿ ಕೆಲಸ ಮಾಡಲಿ.
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

**ಇದು ಸಮ್ಮಿಶ್ರ ಸರ್ಕಾರ**

ಹಳೇ ಮೈಸೂರು ಭಾಗವನ್ನು ಗುರಿಯಾಗಿಸಿಕೊಂಡು ಕಾಂಗ್ರೆಸ್ ಸರ್ಕಾರ ಸಚಿವ ಸ್ಥಾನಗಳನ್ನು ನೀಡುತ್ತಿದೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಸರ್ಕಾರದಲ್ಲಿರುವುದು ಕಾಂಗ್ರೆಸ್ ಸಚಿವ ಸಂಪುಟವಲ್ಲ, ಒಂದು ರೀತಿಯ ಸಮ್ಮಿಶ್ರ ಸರ್ಕಾರವಾಗಿದೆ. ಅದನ್ನು ನಾನು ಹೇಳುತ್ತಿಲ್ಲ, ಕಾಂಗ್ರೆಸ್‌ನವರೇ ಹೇಳುತ್ತಿದ್ದಾರೆ. ಇದು ಕಾಂಗ್ರೆಸ್ ಪಕ್ಷದ ಸರ್ಕಾರವಲ್ಲ, ಸಮ್ಮಿಶ್ರ ಸರ್ಕಾರ ಎಂದು ಕಾಂಗ್ರೆಸ್‌ನ ಕೆಲವು ಶಾಸಕರೇ » ನಾಲ್ಕನೇ ಪುಟದಲ್ಲಿ

**ದುಡ್ಡಿಲ್ಲದಿದ್ದರೂ ಜನಬಲವಿದೆ**

ಜೆಡಿಎಸ್ ಸಣ್ಣ ಪಕ್ಷವಾಗಿರಬಹುದು. ಪಕ್ಷದ ಖಜಾನೆಯಲ್ಲಿ ದೊಡ್ಡ ಪ್ರಮಾಣದ ಹಣವನ್ನು ತುಂಬಿಸಿಟ್ಟಿಲ್ಲ. ಆದರೆ, ಹಣವಿಲ್ಲದಿದ್ದರೂ ಜನಬಲದಿಂದ ರಾಷ್ಟ್ರೀಯ ಪಕ್ಷಗಳೊಂದಿಗೆ ಸ್ಪರ್ಧಿಸುವ ಶಕ್ತಿ ಜೆಡಿಎಸ್‌ಗೆ ಇದೆ. ಪಕ್ಷವನ್ನು ಬೆಳೆಸಿ ಉಳಿಸಿಕೊಂಡು ಬಂದಿರುವ ಜನರ ಒಂದು ವರ್ಗವಿದೆ. ಅವರಿಂದಲೇ ಪಕ್ಷ ಮತ್ತಷ್ಟು ವೃದ್ಧಿಯಾಗಲಿದೆ ಹೊರತು, ಪಕ್ಷವನ್ನು ಯಾರಿಂದಲೂ ಕುಗ್ಗಿಸಲು ಸಾಧ್ಯವಿಲ್ಲ. ಜೆಡಿಎಸ್‌ನ್ನು ಮುಗಿಸುವುದೇ ತಮ್ಮ ಮೊದಲ ಕಾರ್ಯಕ್ರಮ ಎಂದು ಕೆಲವರು ಹೇಳುತ್ತಿದ್ದಾರೆ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

# ತಿಂಗಳ ಪುಣ್ಯಸ್ಮರಣೆಯಂದು ಯೋಜನೆಗಳಿಗೆ ಅಡಿಪಾಯ

## ತಾಯಿಯ ಸಮಾಧಿ ದರ್ಶನ ಪಡೆದ ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ನಮ್ಮ ತಾಯಿ ಚನ್ನಮ್ಮ ಅವರ ಸಮಾಧಿ ಸ್ಥಳದಲ್ಲಿ ಕೈಗೊಳ್ಳಲಿರುವ ಯೋಜನೆಗಳನ್ನು ಮುಂದಿನ 15 ದಿನಗಳಲ್ಲಿ ರೂಪಿಸಿ, ದೇವೇಗೌಡರ ಇಚ್ಛೆಯಂತೆ ತಿಂಗಳ ಪುಣ್ಯಸ್ಮರಣೆ ದಿನ ಅಡಿಪಾಯ ಹಾಕಲಾಗುವುದೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಿಳಿಸಿದರು.

ಶನಿವಾರ ತಾಯಿಯ ಸಮಾಧಿ ದರ್ಶನ ಪಡೆದ ಬಳಿಕ ಹರದನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಲ್ಲಿನ ಭೂಮಿಯಲ್ಲಿ ನಮ್ಮ ತಾಯಿಯ ಅಂತಿಮ ಕಾರ್ಯ ನೆರವೇರಿಸಿದ್ದೇವೆ. ನಮ್ಮ ಮುಂದೆ ತಾಯಿ ಇದ್ದಾರೆ ಎಂದು ಪ್ರತಿನಿತ್ಯ ನೆನಪಿಸಿಕೊಳ್ಳುತ್ತೇವೆ. ಚನ್ನಮ್ಮ ಅವರನ್ನು ಜೀವಂತವಾಗಿ ನೋಡಲು ಸಾಧ್ಯವಿಲ್ಲದಿದ್ದರೂ, ಅವರು ನಮ್ಮೊಂದಿಗಿದ್ದಾರೆಂದು ನೆನಪು ಮಾಡಿಕೊಳ್ಳಲಾಗುತ್ತಿದೆ ಎಂದರು.



**ಮೂರು ದಿನ ಪಾದಯಾತ್ರೆ**

ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಭಾನುವಾರ ನಡೆಯಲಿರುವ ಪಾದಯಾತ್ರೆಯಲ್ಲಿ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಶಾಸಕರು ಹಾಗು ಪಕ್ಷದ ಮುಖಂಡರು ಭಾಗವಹಿಸಲಿದ್ದಾರೆ. ಬೈರಮಂಗಲದಿಂದ ಪಾದಯಾತ್ರೆ ಆರಂಭವಾಗಲಿದ್ದು, ನೈಸ್ ರಸ್ತೆಯಲ್ಲಿ ಪಾದಯಾತ್ರೆಗೆ ಚಾಲನೆ ನೀಡಲಾಗುವುದು. ಮೂರು ದಿನಗಳ ಕಾಲ ಪಾದಯಾತ್ರೆ ನಡೆಯಲಿದೆ. ಸರ್ಕಾರ ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡು ಯೋಜನೆಯನ್ನು ಮುಂದುವರಿಸಲು ಹೊರಟಿದೆ. ಈ ಹಿನ್ನಲೆ ಸರ್ಕಾರಕ್ಕೆ ಎಚ್ಚರಿಕೆ ನೀಡುವುದರ ಜೊತೆಗೆ, ಯೋಜನೆಯನ್ನು ಕೈಬಿಡಬೇಕೆಂದು ಒತ್ತಾಯಿಸಿ ಪಾದಯಾತ್ರೆ ನಡೆಸಲಾಗುತ್ತಿದೆ ಎಂದು ಹೇಳಿದರು.

**ತಂತ್ರ ಬಳಸಿ ಹೊರಟ್ಟಿ ರಾಜೀನಾಮೆ**

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ರಾಜೀನಾಮೆ » ನಾಲ್ಕನೇ ಪುಟದಲ್ಲಿ

# ಗಂಡನಿಂದ ಕಿರುಕುಳಕ್ಕೆ ಒಳಗಾದ ಮಹಿಳೆ ರಕ್ಷಣೆ

• ಪ್ರಜೋದಯ ವರದಿ

**ಬೇಲೂರು:** ಗಂಡನ ಚಿತ್ರಹಿಂಸೆಯಿಂದ ನಿತ್ಯ ನರಕಯಾತನೆ ಅನುಭವಿಸುತ್ತಿದ್ದ ಮಹಿಳೆಯೊಬ್ಬರನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ. ಕೆ.ದಾಕ್ಷಾಯಿಣಿ ಅವರು ರಕ್ಷಿಸಿ ವೈದ್ಯಕೀಯ ಚಿಕಿತ್ಸೆಗೆ ನೆರವಾಗಿದ್ದಾರೆ.

ತಾಲ್ಲೂಕಿನ ಆಂದಲೆ ಗ್ರಾಮದ ಲೀಲಾ ಎಂಬುವವರಿಗೆ ಪತಿ ಉಮೇಶ್ ನಿತ್ಯ ಕಿರುಕುಳ ನೀಡುತ್ತಿದ್ದ. ಈ ವಿಚಾರವನ್ನು ದೂರವಾಣಿ ಮೂಲಕ ಗ್ರಾಮಸ್ಥರೊಬ್ಬರು ನ್ಯಾಯಾಧೀಶರ ಗಮನಕ್ಕೆ ತಂದಿದ್ದರು. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ದಾಕ್ಷಾಯಿಣಿ ಅವರು ಮಹಿಳೆಯ ಸ್ಥಿತಿಕಂಡು ಮಮ್ಮಲ ಮರುಗಿದರು. ಕುಡಿದ ಅಮಲಿನಲ್ಲಿ ಗಂಡನಿಂದ ಹಿಂಸೆ ಅನುಭವಿಸುತ್ತಿದ್ದ ಮಹಿಳೆಯ ನೋವು ಆಲಿಸಿ ಸಾಂತ್ವನ ಹೇಳಿದರು.



ಈ ವೇಳೆ ಲೀಲಾ ಅವರು ಮಾತನಾಡಿ, ಕಳೆದ ಒಂದು ವಾರದಿಂದ ಇದೇ ರೀತಿ ಚಿತ್ರಹಿಂಸೆ ನೀಡಲಾಗುತ್ತಿದೆ. ನಮಗೆ ಇಬ್ಬರು ಮಕ್ಕಳಿದ್ದು ಮಗಳನ್ನು ಮದುವೆ ಮಾಡಿಕೊಟ್ಟಿದ್ದೇನೆ. ಮಗ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದಾನೆ. ಇತ್ತೀಚೆಗೆ ಮನೆಯಲ್ಲಿ ಪದೇ ಪದೇ ಜಗಳ ನಡೆಯುತ್ತಿದ್ದು ಗಂಡನ ಕಿರುಕುಳ ತಾಳಲಾರದೆ ಹಾಸನದ ಖಾಸಗಿ ಕಣ್ಣಿನ ಆಸ್ಪತ್ರೆಯಲ್ಲಿ ಆಯಾ ಕೆಲಸಕ್ಕೆ ಸೇರಿಕೊಂಡಿದ್ದೆ. 15 ದಿನಗಳ ಹಿಂದೆ ಕೆಲಸದ ಸ್ಥಳಕ್ಕೆ ಬಂದ ಪತಿ ಜಗಳ ಮಾಡಿ ಮನೆಗೆ ಕರೆದುಕೊಂಡು ಬಂದಿದ್ದ. ಅಷ್ಟು ಮಾತ್ರವಲ್ಲದೆ ಮುಖಕ್ಕೆ » ನಾಲ್ಕನೇ ಪುಟದಲ್ಲಿ

## ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ತಪ್ಪು ಮಾಡಿಲ್ಲ | ಬಿ.ಶಿವರಾಮ್ ಹೇಳಿಕೆ

# ಬಗರ್ ಹುಕುಂ ತನಿಖೆ ಸಿಐಡಿ ಬದಲು ಪೊಲೀಸರೇ ಮಾಡಲಿ

• ಪ್ರಜೋದಯ ವರದಿ

**ಹಾಸನ:** ಬೇಲೂರು ತಾಲ್ಲೂಕಿನ ಬಗರ್ ಹುಕುಂ ಯೋಜನೆ ಅಕ್ರಮ ಮಂಜೂರು ಪ್ರಕರಣವನ್ನು ಜಿಲ್ಲಾಡಳಿತ ಏಕಾಏಕಿ ಸಿಐಡಿ ತನಿಖೆಗೆ ವಹಿಸಿದ್ದು ರೈತರಲ್ಲಿ ಆತಂಕ ಹುಟ್ಟುಹಾಕಿದೆ. ರೈತರನ್ನು ಕಳ್ಳರಂತೆ ಬಿಂಬಿಸುವುದು ಸರಿಯಲ್ಲವೆಂದು ಮಾಜಿ ಸಚಿವ ಬಿ.ಶಿವರಾಮ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಕೋಲಾರದ ಆರ್‌ಟಿಐ ಕಾರ್ಯಕರ್ತ ರಾಜಣ್ಣ ಎಂಬಾತನ ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದ ಕಾರಣಕ್ಕೆ ಪ್ರಕರಣ ಗಂಭೀರ ಸ್ವರೂಪ ಪಡೆಯಿತು. ಬೇಲೂರು ಮಾತ್ರವಲ್ಲದೆ ಕಳಸ, ಕಡೂರು ಸೇರಿ ರಾಜ್ಯದ ಹಲವೆಡೆ ಅಕ್ರಮ ಮಂಜೂರು ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಾಗಿದೆ. ಆದರೆ ಸ್ಥಳೀಯ ಪೊಲೀಸರೇ ವಿಚಾರಣೆ ಕೈಗೆತ್ತಿಕೊಂಡಿದ್ದಾರೆ. ಆದರೆ 2025ರ ಜ.4ರಂದು ಜಿಲ್ಲಾಧಿಕಾರಿ ಆಗಿದ್ದ ಸತ್ಯಭಾಮ ಅವರು ವಿಚಾರಣೆ ವಿಳಂಬವಾಗುತ್ತಿದೆಯೆಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದು ಸಿಐಡಿ ತನಿಖೆಗೆ ಕೋರಿದರು.



ಹೈಕೋರ್ಟ್ ಹಾಗು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವೇ ಪೊಲೀಸರಿಂದ ತನಿಖೆ ನಡೆಸಬೇಕೆಂದು ಹೇಳಿದರೂ ಸಿಐಡಿಗೆ ಜವಾಬ್ದಾರಿ ವಹಿಸಿದ್ದು ಏಕೆ ಎಂಬ ಪ್ರಶ್ನೆ ಕಾಡುತ್ತಿದೆ. ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರನ್ನು ಮಹಾಅಪರಾಧಿ ಎಂಬಂತೆ ಬಿಂಬಿಸಿ ಬಂಧಿಸಲಾಗಿದೆ. ನನ್ನ ಅವಧಿಯಲ್ಲೂ 40 ಸಾವಿರ ಎಕರೆ ಮಂಜೂರು ಪ್ರಕ್ರಿಯೆ ನಡೆದಿದೆ. ಎಲ್ಲಾ ಅವಧಿಯಲ್ಲಿ ಶೇ.10 ರಷ್ಟು ಲೋಪಗಳಾಗಿರುತ್ತವೆ. ಹಾಗೆಂದ ಮಾತ್ರಕ್ಕೆ ಶಿಕ್ಷೆಗೆ ಗುರಿಪಡಿಸುತ್ತಾ ಹೋದರೆ ರೈತರ ಗತಿ ಏನು. ಈಗ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ವಾಪಾಸ್ ಪಡೆಯಲು ಸರ್ಕಾರಕ್ಕೆ ಸಾಧ್ಯವಿದೆಯೇ ಎಂದು ಖಾರವಾಗಿ ಪ್ರಶ್ನಿಸಿದರು.

ತನಿಖೆ ನಡೆಸುತ್ತಿರುವ ಸಿಐಡಿ ಹಾಲಿ 1430 » ನಾಲ್ಕನೇ ಪುಟದಲ್ಲಿ

**ಶಿವಲಿಂಗೇಗೌಡರ ಮೇಲೆ ನಿರೀಕ್ಷೆ ಹೆಚ್ಚಿದೆ**

ಸ್ಥಳೀಯರೇ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವುದರಿಂದ ಅವರ ಮೇಲೆ ನಿರೀಕ್ಷೆಗಳು ಹೆಚ್ಚಿವೆ. ಬಗರ್ ಹುಕುಂ ಮಂಜೂರಾತಿ, ಕಾಡಾನೆ ಸಮಸ್ಯೆ ಬಗ್ಗೆ ಜನರು ಅವರ ಗಮನಕ್ಕೆ ತಂದಿದ್ದಾರೆ. ಸಚಿವರ ಬರ ಅಧ್ಯಯನ ಪ್ರವಾಸವನ್ನು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರೂ ಸ್ವಾಗತಿಸಿದ್ದಾರೆ. ಸಚಿವ ಶಿವಲಿಂಗೇಗೌಡರಿಗೆ ನಮ್ಮ ಸಹಕಾರ ಯಾವಾಗಲೂ ಇರುತ್ತದೆ. ಅವರು ಒಳ್ಳೆಯ ಕೆಲಸ ಮಾಡಲಿ, ಹೊರಗಿನವರಿಗಿಂತ ನಮ್ಮವರು ಉಸ್ತುವಾರಿ ಸಚಿವರಾಗುವುದು ಸಂತಸದ ಸಂಗತಿ ಎಂದರು.

ಕೆ.ಎನ್.ರಾಜಣ್ಣ, ಕೃಷ್ಣಬೈರೇಗೌಡ ಸಚಿವರಾಗಿದ್ದರೂ ಯಾವುದೇ ಬದಲಾವಣೆ ಆಗಲಿಲ್ಲ. ಅವರು ಯಾರ ಮಾತು ಕೇಳುತ್ತಿದ್ದರು ಎಂಬುದು ನಮಗೆ ಗೊತ್ತಾಗುತ್ತಿರಲಿಲ್ಲ. ಈ ಸಂಬಂಧ ನಾನು ಜಿಲ್ಲಾಧಿಕಾರಿ ಎದುರೇ ಗಲಾಟೆ ಮಾಡಿದ್ದೇನೆ. ಸ್ಥಳೀಯರೇ ಸಚಿವರಾಗಿರುವುದರಿಂದ ನಿರೀಕ್ಷೆಗಳು ಹೆಚ್ಚಿವೆ. ಅವರ ಕಾರ್ಯವೈಖರಿ ಹೇಗೆಂದು ತಿಳಿಯಲು ಸ್ವಲ್ಪ ಸಮಯ ಬೇಕಾಗುತ್ತದೆಂದರು.

# ಗೂಡ್ಸ್ ಲಾರಿ ಡಿಕ್ಕಿ: ಪಾದಚಾರಿ ಸಾವು

• ಪ್ರಜೋದಯ ವರದಿ

**ಅರಸೀಕೆರೆ:** ಗೂಡ್ಸ್ ಲಾರಿ ಪಾದಚಾರಿಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ತಿರುಪತಿಹಳ್ಳಿ ಗ್ರಾಮದಲ್ಲಿ ನಡೆದಿದೆ. ತಿರುಪತಿಹಳ್ಳಿ ಗ್ರಾಮದ ಚೇತನ್ (34) ಮೃತ.

ಚೇತನ್ ಅವರು ಜಮೀನಿಂದ ಮನೆಗೆ ವಾಪಾಸ್ ಹೋಗಲೆಂದು ತಿರುಪತಿಹಳ್ಳಿ ಬಸ್ ನಿಲ್ದಾಣದ ಸಮೀಪ ಸರ್ವಿಸ್ ರಸ್ತೆಯ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೇಳೆ ಗಂಡಸಿ ಕಡೆಯಿಂದ ವೇಗವಾಗಿ ಬಂದ ಗೂಡ್ಸ್ ಲಾರಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಚೇತನ್ ಕೆಳಗೆ ಬಿದ್ದಿದ್ದು, ಲಾರಿಯ ಚಕ್ರಕ್ಕೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಧ ಅರಸೀಕೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪತ್ರಕರ್ತರು ಪ್ರಜಾಪ್ರಭುತ್ವದ ಗಟ್ಟಿ ಧ್ವನಿಯಾಗಿರಬೇಕು

## ಶಾಸಕ ಹೆಚ್.ಕೆ.ಸುರೇಶ್ ಕಿವಿಮಾತು | ಬೇಲೂರಿನಲ್ಲಿ ಪತ್ರಿಕಾ ದಿನಾಚರಣೆ

• ಪ್ರಜೋದಯ ವರದಿ

**ಬೇಲೂರು:** ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸುವಲ್ಲಿ ಮಾಧ್ಯಮದ ಕೊಡುಗೆ ಅಪಾರವಾಗಿದೆ. ಜನಪ್ರತಿನಿಧಿಗಳನ್ನು ಎಚ್ಚರಿಸುವ ಹಾಗು ಜನರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಪತ್ರ ಕರ್ತರ ಸೇವೆ ಅಮೋಘವಾದುದು ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಪಟ್ಟಣದ ಆರ್.ವಿ.ಕನ್ವೆನ್ಷನ್ ಹಾಲ್‌ನಲ್ಲಿ ಶನಿವಾರ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸಮಾಜ ಹಾಗು ರಾಜಕೀಯ ಕ್ಷೇತ್ರದಲ್ಲಿರುವ ಅಂಕು ಡೊಂಕುಗಳನ್ನು ತಿದ್ದುವಲ್ಲಿ ಪತ್ರಕರ್ತರ ಪಾತ್ರ ಮಹತ್ತರವಾಗಿದೆ. ಪತ್ರಕರ್ತರ ಬರಹ ಪ್ರಜಾಪ್ರಭುತ್ವದ ಗಟ್ಟಿ ಧ್ವನಿಯಾಗಿ ನಿಲ್ಲುತ್ತದೆ. ತಪ್ಪು ಯಾರೇ ಮಾಡಿರಲಿ, ಎಷ್ಟೇ ದೊಡ್ಡ ವ್ಯಕ್ತಿಯಾಗಿರಲಿ, ಅವರನ್ನು ಸರಿದಾರಿಗೆ ತರುವ ಜವಾಬ್ದಾರಿ ಪತ್ರಕರ್ತರ ಮೇಲಿದೆ ಎಂದರು.



ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಶಾಸಕರ ನಿಧಿಯಿಂದ 5 ಲಕ್ಷ ರೂ. ದೇಣಿಗೆ ನೀಡುವುದಾಗಿ ಶಾಸಕ ಹೆಚ್.ಕೆ.ಸುರೇಶ್ ಅವರು ಘೋಷಿಸಿದರು.

ಮಾಜಿ ಸಚಿವ ಬಿ.ಶಿವರಾಮ್ ಅವರು ಮಾತನಾಡಿ, ಸಮಾಜದ ಹುಳುಕುಗಳನ್ನು ಹೊರತೆಗೆದು ವ್ಯವಸ್ಥೆಯನ್ನು ಸರಿದಾರಿಗೆ ತರುವಲ್ಲಿ ಪತ್ರಕರ್ತರ ಪಾತ್ರ ನಿರ್ಣಾಯಕವಾಗಿದೆ. ಮಾಧ್ಯಮವನ್ನು ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭ ಎಂದು ಕರೆಯಲಾಗುತ್ತದೆ. ಅದರೊಂದಿಗೆ ಸಾಮಾಜಿಕ ಜವಾಬ್ದಾರಿಯೂ ಇದೆ. ಸಮಾಜದ ಲೋಪದೋಷಗಳನ್ನು ತಿದ್ದುವ ನಿಟ್ಟಿನಲ್ಲಿ ಪತ್ರಕರ್ತರು ಕಾರ್ಯನಿರ್ವಹಿಸಬೇಕು ಎಂದ ಅವರು, ತಾಲ್ಲೂಕು ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ನಿಧಿಗೆ 1 ಲ.ರೂ. ದೇಣಿಗೆ » ನಾಲ್ಕನೇ ಪುಟದಲ್ಲಿ

**ಪ್ರಗತಿಗೆ ಪೂರಕವಾಗಿ ಕೆಲಸ ಮಾಡೋಣ**

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಅವರು ಮಾತನಾಡಿ, ಯಾವುದೇ ವ್ಯಕ್ತಿ, ಪಕ್ಷ ಅಥವಾ ವಿಚಾರದ ಪರ ವಹಿಸದೆ ಘಟನೆಯನ್ನು ಇದ್ದದ್ದು ಇದ್ದಂತೆ ಜನರಿಗೆ ತಲುಪಿಸುವುದು ಪತ್ರಕರ್ತರ ಕರ್ತವ್ಯ. ಸಮಾಜದ ಶಾಂತಿ, ಸೌಹಾರ್ದತೆ ಮತ್ತು ಪ್ರಗತಿಗೆ ಪೂರಕವಾಗುವ ವಿಷಯ ಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದರು.

ಜಾತಿ, ಜನಾಂಗ ಅಥವಾ ಪಕ್ಷದ ಆಧಾರದ ಮೇಲೆ ಯಾವುದೇ ರೀತಿಯ ಪಕ್ಷಪಾತ ಮಾಡದೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ಪರಿಸರ, ರೈತರ ಸಮಸ್ಯೆಗಳು ಹಾಗು ಮೂಲಸೌಕರ್ಯಗಳ ಕುರಿತು ಜನರ ಧ್ವನಿಯಾಗುವ ಸುದ್ದಿಗಳಿಗೆ ಪತ್ರಕರ್ತರು ಗಮನ ಹರಿಸಬೇಕೆಂದರು.

# ಜಿಲ್ಲಾ ವೀರಶೈವ ಮಹಾಸಭಾಧ್ಯಕ್ಷ ರಾಜೀನಾಮೆ

• ಪ್ರಜೋದಯ ವರದಿ



**ಹಾಸನ:** ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ನವಿಲೆ ಪರಮೇಶ್ ಅವರು ರಾಜೀನಾಮೆ ನೀಡಿದ್ದಾರೆ.

ಈ ಹಿಂದೆ ಜಿಲ್ಲಾ ವೀರಶೈವ ಸಂಘಕ್ಕೆ ನಡೆದ ಚುನಾವಣೆ ಸನ್ನಿವೇಶದಲ್ಲಿ ಮಾಡಿಕೊಂಡ ಒಡಂಬಡಿಕೆಗೆ ಬದ್ಧರಾಗಿ ಅವರು ರಾಜೀನಾಮೆ ನೀಡಿದ್ದಾರೆಂದು ತಿಳಿದು ಬಂದಿದೆ.

ಜಿಲ್ಲಾ ವೀರಶೈವ ಸಂಘದ ಅಧ್ಯಕ್ಷ ಗಾದಿಗೆ ಏರ್ಪಟ್ಟ ಚುನಾವಣೆ ವೇಳೆ ಮಾಜಿ ಶಾಸಕರಾದ ಬಿ.ಆರ್. ಗುರುದೇವ್, ಕೆ.ಎಸ್.ಲಿಂಗೇಶ್, ನವಿಲೆ ಪರಮೇಶ್ ಹಾಗು ಪುನೀತ್ ಪಟೇಲ್ ಅವರು ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಆ ವೇಳೆ ಸಮಾಜದ ಮುಖಂಡರ ಸಲಹೆಗೆ ಮನ್ನಣೆ ಕೊಟ್ಟು ಲಿಂಗೇಶ್ ಮತ್ತು ಗುರುದೇವ್ ಕಣದಿಂದ ಹಿಂದೆ ಸರಿದಿದ್ದರು. ಆ ಹೊತ್ತಿನಲ್ಲಿ ಈ ಇಬ್ಬರು ಅಧಿಕಾರಕ್ಕೆ ಕಟ್ಟುಬಿದ್ದಿದ್ದರಿಂದ ತೀರ್ಮಾನದ ಚಂಡು ನೊಣವಿನಕೆರೆ ಕಾಡು ಸಿದ್ದೇಶ್ವರ ಸ್ವಾಮೀಜಿಯವರ ಅಂಕಣಕ್ಕೆ ಜಿಗಿದು ಅಲ್ಲಿ ಪರಮೇಶ್ ಹಾಗು ಪುನೀತ್ ನಡುವಿನ ಅಧಿಕಾರ ಹಂಚಿಕೆಯ ಸೂತ್ರ ಏರ್ಪಟ್ಟು ಇಬ್ಬರು ಅಜ್ಜಯ್ಯನ ಗದ್ದುಗೆ ಮುಂದೆ ಪ್ರಮಾಣ ಮಾಡಿ ಬಂದರು.

ಮೊದಲು ಅಧ್ಯಕ್ಷ ಗಾದಿ ಹಿಡಿದ ಪರಮೇಶ್‌ಗೆ ಎರಡು ವರ್ಷ, ಪುನೀತ್‌ಗೆ ಮೂರು ವರ್ಷ ಆ ಪ್ರಕಾರ ತಮ್ಮ ಎರಡು ವರ್ಷದ ಸಮಯ ಮುಗಿದಿದ್ದರಿಂದ ಪರಮೇಶ್ ರಾಜೀನಾಮೆ ಕೊಟ್ಟಿದ್ದಾರೆ.

# ಅರಕಲಗೂಡು ರಸ್ತೆ ಕಾಮಗಾರಿ ಪರಿಶೀಲಿಸಿದ ಕೆಶಿಪ್ ಅಧಿಕಾರಿಗಳು



• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದಲ್ಲಿ ನಡೆಯುತ್ತಿರುವ 1 ಕಿ.ಮೀ. ವಿಸ್ತೀರ್ಣದ ರಸ್ತೆ ಕಾಮ ಗಾರಿ ಅವೈಜ್ಞಾನಿಕವಾಗಿದೆ ಎಂಬ ಆರೋಪದ ಹಿನ್ನಲೆಯಲ್ಲಿ ಶನಿವಾರ ಕೆಶಿಪ್ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಸುಮಾರು 6.50 ಕೋ. ರೂ. ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ಬೆಂಗಳೂರು, ಮೈಸೂರು ಹಾಗು ಹಾಸನ ವಿಭಾಗಗಳಿಂದ ಆಗಮಿಸಿದ್ದ ಅಧಿಕಾರಿಗಳ ತಂಡ ರಸ್ತೆಯ ಅರ್ಧ ಕಿ.ಮೀ. ತನಕ ಅಳವಡಿಸಿರುವ ಡಾಂಬರ್ ಹಾಗು ಫುಟ್‌ಪಾತ್ ಕಾಮಗಾರಿಯನ್ನು ಯಂತ್ರಗಳಿಂದ ರಿಗ್ ಮಾಡಿ ಬಳಕೆಯಾಗಿರುವ ಡಾಂಬರ್, ಕಾಂಕ್ರಿಟ್ ಅನ್ನು ವಶಕ್ಕೆ ಪಡೆಯಿತು.

ಈ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ ಅಧಿಕಾರಿ ಗಳು, ಅರಕಲಗೂಡು ಪಟ್ಟಣದಲ್ಲಿ ಕೈಗೊಳ್ಳಲಾಗಿ ರುವ ರಸ್ತೆ ಅಭಿವೃದ್ಧಿ ಹಾಗು ಫುಟ್‌ಪಾತ್ ನಿರ್ಮಾಣ ಕಾಮಗಾರಿ ಅವೈಜ್ಞಾನಿಕ, ಗುಣಮಟ್ಟವಿಲ್ಲ. ಅಲ್ಲದೆ ಕೆಲವು ಕಡೆ ರಸ್ತೆ ಮತ್ತು ಫುಟ್ ಪಾತ್ ಅನ್ನು ಡಿಪಿಎಆರ್ ಪ್ರಕಾರ ನಿರ್ವಹಿಸಿಲ್ಲ ಎಂಬುದಾಗಿ ದೂರ ಸಲ್ಲಿಕೆಯಾಗಿದ್ದು, ಈ ಸಲುವಾಗಿ ಕಾಮಗಾರಿ ತಪಾಸಣೆಗೆ ಬಂದಿದ್ದೇವೆ. ಹಲವು ಕಡೆ ಅಗತ್ಯ ಮಾಹಿತಿ, ಕಾಮಗಾರಿಗೆ ಬಳಕೆ ಮಾಡಿ ರುವ ವಸ್ತುಗಳನ್ನು ಪಡೆಯಲಾಗಿದೆ. ಇವುಗಳನ್ನು ತಪಾಸಣೆಗೆ ಒಳಪಡಿಸಿ ವರದಿ ಸಲ್ಲಿಸಲಾಗುವುದೆಂದರು. » ನಾಲ್ಕನೇ ಪುಟದಲ್ಲಿ

## ಜಿಲ್ಲೆಯ 31 ಗ್ರಾಮಗಳಲ್ಲಿ ಆತಂಕ | ಆಕ್ಷೇಪಣೆ ಸಲ್ಲಿಕೆಗೆ ಗ್ರಾಮಸಭೆ ನಡೆಸಲು ಒತ್ತಾಯ

# ಕಸ್ತೂರಿ ರಂಗನ್ 7ನೇ ಕರಡು: ಮತ್ತೆ ಕದಡಿದ ಮಲೆನಾಡು

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಪಶ್ಚಿಮ ಘಟ್ಟಗಳ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಕಸ್ತೂರಿ ರಂಗನ್ ವರದಿಯ 7ನೇ ಕರಡು ಅಧಿಸೂಚನೆ ಮಲೆನಾಡು ಭಾಗದಲ್ಲಿ ಮತ್ತೊಮ್ಮೆ ಆತಂಕಕ್ಕೆ ಕಾರಣವಾಗಿದೆ.

ಕೇಂದ್ರ ಸಚಿವಾಲಯದ ಅಧಿಕೃತ ಮಾಹಿತಿಯಂತೆ, ಕರಡು ಅಧಿಸೂಚನೆಗೆ ಸಾರ್ವಜನಿಕರು, ರಾಜ್ಯ ಸರ್ಕಾರಗಳು ಹಾಗು ಇತರೆ ಬಾಧಿತರು ಲಿಖಿತ ಸಲಹೆ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು 60 ದಿನಗಳ ಕಾಲಾವಕಾಶ ನೀಡಲಾಗಿದೆ. ಆಕ್ಷೇಪಣೆ ಸಲ್ಲಿಸಲು ಬಾಧಿತ ಪ್ರತಿ ಗ್ರಾಮದಲ್ಲೂ ವಿಶೇಷ ಗ್ರಾಮಸಭೆ ನಡೆಸಬೇಕು. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮಸಭೆ ಕರೆದು, ಅಧಿಸೂಚನೆಯಿಂದ ಉಂಟಾಗಬಹುದಾದ ಪರಿಣಾಮಗಳ ಕುರಿತು ಗ್ರಾಮಸ್ಥರಿಗೆ ಮಾಹಿತಿ ನೀಡಬೇಕು. ಬಳಿಕ ಗ್ರಾಮಸ್ಥರು, ರೈತರು ಹಾಗು ಸ್ಥಳೀಯ ಸಂಘಟನೆಗಳ ಅಭಿಪ್ರಾಯಗಳನ್ನು ದಾಖಲಿಸಿಕೊಂಡು, ಅವುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಬೇಕು ಎಂಬುದು ಗ್ರಾಮಸ್ಥರ ಒತ್ತಾಯ.



**ಪರಿಸರ ರಕ್ಷಣೆ ಅಗತ್ಯ, ಜನರ ಬದುಕು ಮುಖ್ಯ**

ಪಶ್ಚಿಮ ಘಟ್ಟವು ಜೀವವೈವಿಧ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ ಪ್ರದೇಶವಾಗಿದ್ದು, ಪ್ರಸ್ತುತ ಹವಾಮಾನ ವೈಪರೀತ್ಯ, ಅತಿವೃಷ್ಟಿ, ಅನಾವೃಷ್ಟಿ, ಭೂಕುಸಿತ ಮತ್ತಿತರ ಘಟನೆಗಳ ಹಿನ್ನಲೆ ಸಂರಕ್ಷಣೆ ಅಗತ್ಯವಾಗಿದೆ. ಕಸ್ತೂರಿ ರಂಗನ್ ಸಮಿತಿಯ ಶಿಫಾರಸ್ಸುಗಳ ಮೂಲ ಉದ್ದೇಶವೂ ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ರಕ್ಷಿಸುವುದಾಗಿದೆ. ಆದರೆ, ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ದಶಕಗಳಿಂದ ಕೃಷಿ ಮಾಡಿಕೊಂಡು ಬದುಕುತ್ತಿರುವ ಜನರ ಜೀವನೋಪಾಯಕ್ಕೆ ಧಕ್ಕೆಯಾಗಬಾರದೆಂಬುದು ಮಲೆನಾಡಿನ ಜನರ ಪ್ರಮುಖ ಬೇಡಿಕೆಯಾಗಿದೆ.

ಈ ಕುರಿತು ಸ್ಥಳೀಯ ಶಾಸಕರು ಜಿಲ್ಲಾಡಳಿತಕ್ಕೆ ಸ್ಪಷ್ಟ ಸೂಚನೆ ನೀಡಬೇಕು. ಯಾವುದೇ ಗ್ರಾಮಸ್ಥರ ಅಭಿಪ್ರಾಯವನ್ನು ಕಡೆಗಣಿಸದೆ, ಪ್ರತಿ ಗ್ರಾಮದ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿ ಆಕ್ಷೇಪಣೆ ಸಲ್ಲಿಸುವ ವ್ಯವಸ್ಥೆ ಮಾಡಬೇಕೆಂದು ಆಗ್ರಹಿಸಲಾಗುತ್ತಿದೆ.

**31 ಗ್ರಾಮಗಳ ಮೇಲೆ ಕಣ್ಣು**

ಸಕಲೇಶಪುರ ಹಾಗು ಆಲೂರು ತಾಲ್ಲೂಕಿನ ಒಟ್ಟು 31 ಗ್ರಾಮಗಳು ಪರಿಸರ ಸೂಕ್ಷ್ಮ ಪ್ರದೇಶದ ಪ್ರಸ್ತಾವಿತ ಪಟ್ಟಿಯಲ್ಲಿ ಪ್ರಕಟಗೊಂಡಿದೆ. ಹೀಗಾಗಿ ಈ ಗ್ರಾಮಗಳಲ್ಲಿ ಮತ್ತೆ ಆತಂಕದ ವಾತಾವರಣ ನಿರ್ಮಾಣವಾಗಿದೆ. ಆಲೂರು ತಾಲ್ಲೂಕಿನ ಅಡಿಬೈಲು ಹಾಗು ಸಕಲೇಶಪುರ ತಾಲ್ಲೂಕಿನ ಆಚನಹಳ್ಳಿ, ಅಗ್ನಿ, ಅಲುವಳ್ಳಿ, ಅರಿಣಿ ಕಾಫಿ ಎಸ್ಟೇಟ್, ಅರಿಣಿ, ಅತ್ತಿಹಳ್ಳಿ, ಬಾಣಗೆರೆ, ಬಾಳೆಹಳ್ಳ, ಬೆಟ್ಟಕುಮಾರಿ, ದೇವಿಹಳ್ಳಿ, ಹೆಗ್ಗದ್ದೆ, ಹೊಡಚಹಳ್ಳಿ, ಹೊಂಗಡಹಳ್ಳ, ಹೊಸಹಳ್ಳಿ, ಜೆಡಿಗದ್ದೆ, ಕಡಗರವಳ್ಳಿ, ಕಡಗರವಳ್ಳಿ ಕಾಫಿ ಎಸ್ಟೇಟ್, ಕಾಡುಮನೆ, ಕಾಡುಮನೆ ಕಾಫಿ ಎಸ್ಟೇಟ್, ಕಾಗಿನಹರೆ ರಾಜ್ಯ ಅರಣ್ಯ, ಕೆಸಗನಹಳ್ಳಿ, ಕುಮಾರಹಳ್ಳಿ, ಮಂಕನಹಳ್ಳಿ, ಮರಗತ್ತೂರು, ಮರಗುಂದ, ಮರ್ಕಳ್ಳಿ, ವಣಗೂರು, ಯಡಕುಮಾರಿ, ಯರಗಳ್ಳಿ ಹಾಗು ಎತ್ತಿನಹಳ್ಳ » ನಾಲ್ಕನೇ ಪುಟದಲ್ಲಿ

**ಸೆಪ್ಟೆಂಬರ್ ಅಂತ್ಯದವರೆಗೂ ಆಕ್ಷೇಪಣೆ ಸ್ವೀಕಾರ**

ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶ ಗುರುತಿಸುವ ಪ್ರಕ್ರಿಯೆ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಮುಂದುವರಿದಿದೆ. 6ನೇ ಕರಡು ಅಧಿಸೂಚನೆಗೆ ವಿವಿಧ ರಾಜ್ಯಗಳು ಹಾಗು ಸ್ಥಳೀಯರಿಂದ ಆಕ್ಷೇಪಣೆಗಳು ಬಂದಿದ್ದವು. ಪ್ರಕ್ರಿಯೆ ಅಂತಿಮ ಹಂತ ತಲುಪದೆ ಉಳಿದ ಹಿನ್ನಲೆ ಇದೀಗ 7ನೇ ಕರಡು ಅಧಿಸೂಚನೆ ಹೊರಬಿದ್ದಿದೆ.

2026ರ ಜುಲೈ 27ರಂದು ಹೊರಡಿಸಿರುವ 7ನೇ ಕರಡು ಅಧಿಸೂಚನೆಯನ್ನು ಕೇಂದ್ರ ಪರಿಸರ ಸಚಿವಾಲಯವೇ ತನ್ನ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಿದ್ದು, ಸೆಪ್ಟೆಂಬರ್ 25ರ ವರೆಗೆ ಸಾರ್ವಜನಿಕ ಪ್ರತಿಕ್ರಿಯೆ ಸ್ವೀಕರಿಸುವುದಾಗಿ ತಿಳಿಸಿದೆ. ಈ ಬಾರಿ ಸಲ್ಲಿಕೆಯಾಗುವ ಆಕ್ಷೇಪಣೆಗಳು ಮಹತ್ವ ಪಡೆದುಕೊಂಡಿವೆ. ಗ್ರಾಮಗಳ ಹೆಸರು, ಗಡಿ, ವ್ಯಾಪ್ತಿ ಹಾಗೂ ಅಲ್ಲಿ ಇರುವ ಕೃಷಿ ಮತ್ತು ಜನವಸತಿ ಪ್ರದೇಶಗಳ ವಾಸ್ತವ ಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ ಅಂತಿಮ ಅಧಿಸೂಚನೆಗೂ ಮುನ್ನ ತಿದ್ದುಪಡಿ ಮಾಡಬೇಕೆಂಬ ಬೇಡಿಕೆ ಬಲಗೊಂಡಿದೆ.

# ಬ್ರೆಜಿಲ್‌ನ ಕಾಡಿನಲ್ಲಿ ಲಕ್ಷ ವೀರಪ್ಪನ್‌ಗಳಿದ್ದಾರೆ

> ಕಾಡು ನೋಡಲು ಬ್ರೆಝಿಲ್ ನ ಮನೌಸ್ ನಗರಕ್ಕೆ ಬಂದಿಳಿದಾಗ ಹತ್ತಿರದಲ್ಲೆಲ್ಲೋ ಗದ್ದೆ ಕೊಯ್ಲಿನ ನಂತರ ಮಣ್ಣು ಸುಡುವಾಗಿನ ಹೊಗೆಯ ಘಮಲು ನಮ್ಮನ್ನು ಆವರಿಸಿತ್ತು. ಹಳ್ಳಿಮನೆಯ ಬಚ್ಚಲು ಮನೆಯಂತೆ ಇಡೀ ನಗರ ಖಮಟು ಹೊಡೆಯುತ್ತಿತ್ತು. ಇದು ಏನೆಂದು ವಿವರವಾಗಿ ಕೇಳಬೇಕೆಂದರೆ ಅವರಿಗೆ ಪೋರ್ಚುಗೀಸ್ ಭಾಷೆ ಬಿಟ್ಟರೆ ಇನ್ನೊಂದು ಬರುತ್ತಿರಲಿಲ್ಲ. ಇನ್ನು ಎರಡು ದಿನದ ನಂತರ ನಮ್ಮನ್ನು ಇಂಗ್ಲಿಷ್ ಗೈಡ್ ಒಬ್ಬ ಸೇರಿಕೊಳ್ಳುವವನಿದ್ದ.

ನಾವು ಕೆಲ ಸ್ನೇಹಿತರು ಸೇರಿ ಅಮೆಜಾನ್ ಕಾಡಿನೊಳಕ್ಕೆ ಸ್ವಲ್ಪ ಹೋಗಿ ನೋಡಿ ಬರೋದು ಅಂತ ಹೊರಟಿದ್ದೆವು. ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಬೆಳೆದ ನನಗೇನು ಕಾಡು ಹೊಸತಾಗಿರಲಿಲ್ಲ. ಆದರೆ ಅಮೆಜಾನ್ ಎಂದರೆ ಅದೇನೋ ಸೆಳೆತ. ಅಮೆಜಾನ್ ನತ್ತ ಆಸಕ್ತಿಯನ್ನು ಮೊದಲು ಹುಟ್ಟು ಹಾಕಿದ್ದು ಹೈಸ್ಕೂಲ್ ಭೂಗೋಳದ ಮೇಸ್ಟ್ರು, ಎಂ.ಎಸ್.ಪ್ರಭು ಅವರು. ಅವರು ಅಮೆಜಾನ್ ಕಾಡನ್ನು ರಸವತ್ತಾಗಿ ಕಟ್ಟಿ ಕೊಡುವಾಗ ಇದೇನು ನಿಮ್ಮ ಮನೆಯ ಹಿಂದಿನ ಬೆಟ್ಟದಂತಲ್ಲ ಎಂದು ತಮಾಷೆ ಮಾಡಿದ್ದರು. ಅಂದೇ ಅಮೆಜಾನ್ ಕಾಡನ್ನು ಒಮ್ಮೆಯಾದರೂ ನೋಡಬೇಕೆಂಬ ಆಸೆ ಹುಟ್ಟಿತ್ತು. ಈಗ ಆ ಸಮಯ ಬಂದಿತ್ತು.

ಅಮೆಜಾನ್ ಕಾಡು ಎಂದರೆ ಅದೊಂದು ಜೈವಿಕ ಮಾಯಾಲೋಕ. 70 ಲಕ್ಷ ಚದರ ಕಿಲೋಮೀಟರ್ ಜಾಗವನ್ನು ಅಮೇಝೋನಿಯಾ ಅಂತ ಕರೆಯೋದು. ಈ ಪ್ರದೇಶದಲ್ಲಿ ಇರುವ ಉಷ್ಣವಲಯದ ಮಳೆ ಕಾಡು (ಟ್ರೋಪಿಕಲ್ ರೈನ್ ಫಾರೆಸ್ಟ್) ಸುಮಾರು 55 ಲಕ್ಷ ಚ.ಕಿ.ಮೀ. ಈ ಕಾಡು ಒಂಭತ್ತು ದೇಶಗಳಿಗೆ ಹರಡಿದ್ದರೂ ಅತಿಹೆಚ್ಚು ಭಾಗ ಇರೋದು ಬ್ರೆಜಿಲ್ ನಲ್ಲಿ. ಇಷ್ಟೊಂದು ಅಗಾಧವಾದ ಕಾಡು, ಸುಮಾರು ಹದಿನಾರು ಸಾವಿರದಷ್ಟು ಮರಗಳ ವೈವಿಧ್ಯ, 25 ಲಕ್ಷ ಕೀಟ ಪ್ರಭೇಧಗಳು, ಎರಡು ಸಾವಿರಕ್ಕೂ ಮೀರಿದ ಹಕ್ಕಿ ಪ್ರಭೇಧಗಳು, ಇನ್ನೊಂದಿಷ್ಟು ಸಾವಿರ ವಲಸೆ ಹಕ್ಕಿಗಳು, ಹತ್ತಿರ ಹತ್ತಿರ ಒಂದು ಲಕ್ಷದಷ್ಟು ವಿಧದ ಅಕಶೇರುಕಗಳು (ಬೆನ್ನೆಲುಬಿಲ್ಲದ ಜೀವಿ) ಇವೆಲ್ಲ ಮನುಷ್ಯನ ಲೆಕ್ಕಕ್ಕೆ ಸಿಕ್ಕವು, ದಾಖಲಾದವು.

ಇದೆಲ್ಲದರ ಜೊತೆ ಬಹುದೊಡ್ಡ ಪ್ರಮಾಣದಲ್ಲಿ ಆಧುನಿಕತೆ, ಹೊರ, ನಾವಿರುವ ಜಗತ್ತಿನಿಂದ ದೂರ, ಕಾಡೊಳಗೆ ಬದುಕುತ್ತಿರುವ 350 ಕಾಡು ಮನುಷ್ಯರ ಜನಾಂಗಗಳು. ಅದರಲ್ಲಿ 60 ಈ ರೀತಿಯ ಮೂಲ ಕಾಡು ನಿವಾಸಿಗಳಿಗೆ ಹೊರಜಗತ್ತಿನ ಇರುವಿಕೆಯ ಅಂದಾಜು ಕೂಡ ಇಲ್ಲ. ಇನ್ನುಳಿದ ಬುಡಕಟ್ಟು ಜನಾಂಗಗಳು ಸ್ವಲ್ಪ ಆಧುನಿಕತೆಯ ಪಸೆಯಂಟಿಸಿಕೊಂಡಿವೆ. ಇದೆಲ್ಲ ಅಲ್ಲಿನ ಬುಡಕಟ್ಟು ಜನಾಂಗದ ಒಟ್ಟೂ ಜನ ಸಂಖ್ಯೆ ಸುಮಾರು ಮೂರು ಕೋಟಿ. ಇವರನ್ನು ಅಲ್ಲಿನ ಜನ ಕಾಡಿನ ರಕ್ಷಕರು ಎಂಬರ್ಥಬರುವ ಹೆಸರಿನಿಂದ ಕರೆಯುವುದು. ಇವರು ನಿಜ ಅರ್ಥದಲ್ಲಿ ಕಾಡಿನ ರಕ್ಷಕರು.

ಕಾಡು ನೋಡಲು ಬ್ರೆಝಿಲ್ ನ ಮನೌಸ್ ನಗರಕ್ಕೆ ಬಂದಿಳಿದಾಗ ಹತ್ತಿರದಲ್ಲೆಲ್ಲೋ ಗದ್ದೆ ಕೊಯ್ಲಿನ ನಂತರ ಮಣ್ಣು ಸುಡುವಾಗಿನ ಹೊಗೆಯ ಘಮಲು ನಮ್ಮನ್ನು ಆವರಿಸಿತ್ತು. ಹಳ್ಳಿಮನೆಯ ಬಚ್ಚಲು ಮನೆಯಂತೆ ಇಡೀ ನಗರ ಖಮಟು ಹೊಡೆಯುತ್ತಿತ್ತು. ಇದು ಏನೆಂದು ವಿವರವಾಗಿ ಕೇಳಬೇಕೆಂದರೆ ಅವರಿಗೆ ಪೋರ್ಚುಗೀಸ್ ಭಾಷೆ ಬಿಟ್ಟರೆ ಇನ್ನೊಂದು ಬರುತ್ತಿರಲಿಲ್ಲ. ಇನ್ನು ಎರಡು ದಿನದ ನಂತರ ನಮ್ಮನ್ನು ಇಂಗ್ಲಿಷ್ ಗೈಡ್ ಒಬ್ಬ ಸೇರಿಕೊಳ್ಳುವವನಿದ್ದ.

ಕಾಡಿಗೆ ಹೊರಡುವ ದಿನ ನಮ್ಮ ಬಟ್ಟೆಯೆಲ್ಲ ಹೊಗೆಯ ವಾಸನೆ. ಅಲ್ಲಿಯವರೆಗೆ ಈ ಹೊಗೆಯ ಕಂಪು ನಮಗೆ ಅಭ್ಯಾಸವಾಗಿ ಕಾರಣ ಕೇಳಬೇಕೆಂಬುದೇ ಮರೆತು ಹೋಗಿತ್ತು. ಕಾಡಿನ ಅಂಚಿನಲ್ಲಿ ಅಲ್ಲಲ್ಲಿ ಇಂತಹ ಹೊಗೆಯಾಡುವುದು ರಿಯೋ ನೆಗ್ರೋ ನದಿಯಲ್ಲಿ ಬೋಟಿನಲ್ಲಿ ಹೋಗುವಾಗ ಮತ್ತೆ ಕಾಣಿಸಿ ನೆನಪಾಯಿತು. ನಾಲ್ಕಾರು ಬಾರಿ ಗೈಡ್ ಹತ್ತಿರ ಕಾರಣ ಕೇಳಿದಾಗ ಕೊನೆಯಲ್ಲಿ ತೀರಾ ಗುಟ್ಟಿನಲ್ಲಿ ಪಿಸುಗುಟ್ಟುತ್ತ ಹೇಳಿದ್ದ. ಇದು ಅಲ್ಲಿನ ಮಾಫಿಯಾಗಳು ಕಾಡನ್ನು ಕೊಳ್ಳೆ ಹೊಡೆಯುವ, ತೋಟ ಮತ್ತು ಗದ್ದೆ ಮಾಡಿ ಮಾರುವ ಕಾರ್ಯದ ಒಂದು ಭಾಗ , ಕಾಡಿಗೆ ಬೆಂಕಿ ಇಡುವುದು ಎಂದು.

ನಾವು ಹತ್ತಿದ್ದ ಬೋಟು ನೆಗ್ರೋ ನದಿಯಲ್ಲಿ ಉತ್ತರಕ್ಕೆ ಹೊರಟು ಮೂರು ದಿನವಾಗಿತ್ತು. ಅಲ್ಲಲ್ಲಿ ಕಾಡಿನ ಮಧ್ಯೆ ಕೋಟೆಯಂತಹ ಗೋಡೆಗಳ ಮಧ್ಯೆ ಇರುವ ಖಾಲಿ ಗೆಸ್ಟ್ ಹೌಸ್ ಗಳಲ್ಲಿ ತಂಗುವುದು. ಅಲ್ಲಿ ಬೇಕಾಗುವ ದಿನಬಳಕೆಯ ಸಾಮಾನುಗಳು ಮತ್ತು ಆಹಾರವನ್ನು ಬೋಟಿನಲ್ಲಿಯೇ ಒಯ್ಯ ಬೇಕಿತ್ತು. ಇಂತಹ ಗೆಸ್ಟ್ ಹೌಸ್‌ಗಳಿಗೆ ಅಲ್ಲಿನ ಕಾಡು ಜನ ಬಂದು ಕಬ್ಜಾ ಮಾಡಿಕೊಳ್ಳ ಬಾರದೆಂದು ಭರ್ಜರಿ ಬಂದೋಬಸ್ತ್ ಇತ್ತು.

ಈ ಮೂರು ದಿನ ನದಿಯ ಗುಂಟ ವಾಸವಿದ್ದ ಜನರನ್ನು ತೋರಿಸಿ ಇವರೆಲ್ಲ ಇಲ್ಲಿನ ಬುಡಕಟ್ಟಿನವರು, ಕಾಡು ಮನುಷ್ಯರು ಎಂದು ನಮ್ಮ ಗೈಡ್ ಕಥೆ ಹೊಡೆಯುತ್ತಿದ್ದ. ಅವರನ್ನು ನೋಡಿದರೆ ತೀರಾ ಬಡ ಕೇರಿಯ ಜನರನ್ನು ನೋಡಿದಂತೆ ಅನ್ನಿಸುತ್ತಿತ್ತು. ನದಿಯಗುಂಟ ಅವರು ಬಂದು ಮೀನು ಹಿಡಿಯುತ್ತಿದ್ದರು, ಪಾತ್ರೆ ಬಟ್ಟೆ ತೊಳೆಯುತ್ತಿದ್ದರು, ಗುಡಿಸಲಿನ ಮನೆಗಳು, ಕೋಳಿ ದನ ಇತ್ಯಾದಿ. ಇವರು ನೋಡಲಿಕ್ಕೆ ಹಿಂದುಳಿದುಬಿಟ್ಟವರಂತೆ ಕಂಡರೂ ಅವರ ಬಟ್ಟೆ, ಪಾತ್ರೆಪಗಡೆ ಇವೆಲ್ಲ ಭಿನ್ನವಾಗೇನೂ ಇರಲಿಲ್ಲ.

ನಾವು ನದಿಯ ಮಧ್ಯೆ ಹೋಗುತ್ತಿದ್ದರೆ ಗುಂಟ ಬಂದು ನಮ್ಮನ್ನು ಕರೆಯುತ್ತಿದ್ದರು, ಬಾಳೆ ಸೇರಿದಂತೆ ನಾನಾ ರೀತಿಯ ಹಣ್ಣುಗಳನ್ನು ಮಾರಾಟಕ್ಕೆ ಡಾಲರ್ ಡಾಲರ್ ಎಂದು ಕೂಗುತ್ತಿದ್ದರು. ಇವರನ್ನು ನೋಡಿ ಅವರ ಬಡತನದ ಬಗ್ಗೆ ಬೇಸರವಾಗುತ್ತಿತ್ತು. ಆದರೆ ಅವರನ್ನು ನೋಡುವ ಯಾವುದೇ ಆಸಕ್ತಿ ನಮ್ಮಲ್ಲಿರಲಿಲ್ಲ.

ಏಕೆಂದರೆ ನಮ್ಮ ಲೆಕ್ಕದಲ್ಲಿ ಕಾಡು ಮನುಷ್ಯರೆಂದರೆ ಬೇರೆಯದೇ ಅನಿಸಿಕೆಗಳಿದ್ದವು. ಗೈಡ್ ಗೆ ಹೇಗಾದರೂ ಮಾಡಿ ಅಲ್ಲಿನ ಮೂಲ ನಿವಾಸಿ ಕಾಡಿನಲ್ಲಿ ವಾಸಿಸುವ ನಿಜವಾದ ಕಾಡು ಜನರನ್ನು ತೋರಿಸಬೇಕೆಂದು ಕೇಳಿಕೊಂಡೆವು. ಅದಕ್ಕೆ ಆತ ಇವರೇ ಅವರು ಎಂದು. ನಮಗೆ ಸಮಾಧಾನವಿಲ್ಲ, ಆತ ಮೊದಲಿಗೆ ಒಪ್ಪಲೇ ಇಲ್ಲ. ಅವರ ಜಾಗಕ್ಕೆ ನದಿಯಲ್ಲಿ ನಾವು ಹೋದರೆ ಬಾಣದಿಂದ, ಈಟಿಯಿಂದ ಕೊಂದು ಬಿಡುತ್ತಾರೆ, ಕಾಡಿನ ಸೆಕ್ಯುರಿಟಿಯವರಿಗೆ ಗೊತ್ತಾದರೆ ನಮ್ಮೆಲ್ಲರನ್ನೂ ಜೈಲಿಗೆ ಹಾಕುತ್ತಾರೆ ಎಂದೆಲ್ಲ ಹೇಳಿದ್ದ, ಅದು ಹೌದು ಕೂಡ.

ನಂತರ ಒಂದಿಷ್ಟು ಭಕ್ಷೀಸ್ ಆತನ ಕಿಸೆಗೆ ತುರಿಕಿದಾಗಲೇ ಆತ ಏನೋ ಒಂದು ಮಾಡೋಣ ಎಂದು ಮನಸ್ಸು ಮಾಡಿದ್ದು. ಆದರೆ ಆತ ಮೊದಲೇ ಹೇಳಿಬಿಟ್ಟಿದ್ದ. ಕಾಡು ಜನರನ್ನು ನೋಡಲಿಕ್ಕಿಲ್ಲ ಸಾಧ್ಯವೇ ಇಲ್ಲ ಆದರೆ ಅವರಿರುವ ಜಾಗದ ಹತ್ತಿರಕ್ಕೆ ಹೋಗಿ ಬರಬಹುದು ಎಂದು. ನಾವು ನಸೀಬು ತಿಳಿಯಲು ತಯಾರಾಗಿದ್ದೆವು.

ನಾಲ್ಕನೆಯ ದಿನ ಬೆಳಿಗ್ಗೆ ಮೂರಕ್ಕೆಲ್ಲ ಹೊರಟುಬಿಡಬೇಕು,! ಎಂದು ಪರೋಕ್ಷವಾಗಿ ಗೈಡ್ ಹೇಳಿದ್ದ. ಆ ದಿನ ಬೆಳಿಗ್ಗೆ ನಾವು ನದಿಯಲ್ಲಿ ಕಾಡಿನಲ್ಲಿ ಬಹಳಷ್ಟು ಒಳಕ್ಕೆ ಬಂದಿದ್ದೆವು. ಸುಮಾರು ಬೆಳಗಿನ ಐದು ಗಂಟೆ. ಅದಾಗಲೇ ಬೆಳಕು ಸ್ವಲ್ಪ ಹರಿದಿತ್ತು. ನಮ್ಮ ಗೈಡ್ ಒಮ್ಮೆಲೇ ಎಲ್ಲರನ್ನೂ ಶಾಂತವಾಗಿಸಿದ. ಬೋಟಿನ ಡಬಲ್ ಎಂಜಿನ್ ಅನ್ನು ಆರಿಸುವಂತೆ ಕ್ಯಾಪ್ಟನ್‌ಗೆ ಸನ್ನೆಯಲ್ಲೇ ಸೂಚಿಸಿದ. ಒಂದಿಷ್ಟು ಹೊತ್ತು ಶಾಂತವೆನಿಸಿದ್ದ ಕಾಡಿನಲ್ಲಿ ಒಮ್ಮಿಂದೊಮ್ಮೆಲೇ ಜೀರುಂಡೆಯ ತಡೆಯಲಾಗದಷ್ಟು ಶಬ್ದ ಶುರುವಾಯಿತು.

ಸಮುದ್ರದಲೆಯಷ್ಟೇ ಭೋರ್ಗರೆತ. ಆಮೇಲೆ, ಕೆಲವು ನಿಮಿಷಗಳಲ್ಲಿ ಎಲ್ಲವೂ ನಿಂತು ಮತ್ತೆ ಭಯ ಹುಟ್ಟುವಷ್ಟು ಭೀಕರ ಮೌನ. ನಾವು ಹಾಗೆ ನದಿಯ ಮೂಲೆಯಲ್ಲಿ ಅಡಗಿ ನಿಂತದ್ದು ಅಲ್ಲಿಯೇ ಇದ್ದ ಕೆಲವು ಫಾರೆಸ್ಟ್ ಗಾರ್ಡ್‌ಗಳಿಗೆ ಕಾಣಿಸಿ ಅವರು ಅಲ್ಲಿಗೆ ಬಂದು ಪಿಸುಮಾತಿನಲ್ಲಿಯೇ ನಮ್ಮ ಕ್ಯಾಪ್ಟನ್‌ಗೆ ಅವಾಜು ಹಾಕುತ್ತಿದ್ದರು.

ಮಧ್ಯೆ ಮಧ್ಯೆ ನಮ್ಮತ್ತ ನೋಡುತ್ತಿದ್ದರು. ಅವರಿಗೆ ಇಂಗ್ಲಿಷ್ ಬರುತ್ತಿರಲಿಲ್ಲ, ನಮಗೆ ಪೋರ್ಚುಗೀಸ್ ತಿಳಿಯುತ್ತಿರಲಿಲ್ಲ. ನಮಗೆ ಈ ಗೈಡ್ ನಮ್ಮ ಮೇಲೆಯೇ ಗೂಬೆ ಕೂರಿಸುತ್ತಿದ್ದಾನೆಯೇ ಎಂಬ ಅನುಮಾನ. ಆ ಕ್ಷಣ ಕಾಡಿನೊಳಗಿಂದ ಒಂದೇ ಸಮನೆ ಸುಮಾರು ಐವತ್ತು ಜನ ಕಲ್ಲು ಕುಟ್ಟುತ್ತಿರುವಂತಹ ಶಬ್ದ ಕೇಳಿಸತೊಡಗಿತು. ಎರಡೂ ಬೋಟಿನವರು ಶಾಂತವಾಗಿ ಕೇಳಿಸಿಕೊಂಡೆವು.



ಅದು ಸುಮಾರು ಹದಿನೈದು ನಿಮಿಷ ಕೇಳಿಸಿತು. ಅವರನ್ನು ನೋಡಲಂತೂ ಆಗಲಿಲ್ಲ, ಕೊನೆಯ ಪಕ್ಷ ಅವರ ಶಬ್ದ ಕೇಳಿಸಿಕೊಂಡು ಬಂದದ್ದಾಯಿತು. ಅಷ್ಟು ಬೆಳಿಗ್ಗೆ ಆ ಕಾಡುಜನ ಏನನ್ನು ಕುಟ್ಟುತ್ತಿದ್ದರು, ಒಂದು ವೇಳೆ ಅಲ್ಲಿ ಆ ಸೆಕ್ಯೂರಿಟಿ ಗಾರ್ಡ್ ಗಳಿಲ್ಲದಿದ್ದಲ್ಲಿ ನಾವು ಮುಂದೆ ಹೋಗುತ್ತಿದ್ದೇವಾ ಇವೆಲ್ಲ ಪ್ರಶ್ನೆಯಾಗಿಯೇ ಉಳಿಯಿತು. ಇದು ಅತ್ಯಂತ ರೋಚಕತೆ ಹುಟ್ಟಿಸಿದ, ಈಗ ನೆನೆಸಿ ಕೊಂಡರೆ ಹುಚ್ಚು ಭಂಡತನ ಎಂದೆನ್ನಿಸುವ ಒಂದು ನೆನಪು.

ಯುರೋಪಿಯನ್ನರು ಬ್ರೆಝಿಲ್‌ಗೆ ಕಾಲಿಡುವ ಸಮಯದಲ್ಲಿ ಇಂತಹ 2000 ಬುಡಕಟ್ಟು, ಕಾಡು ಜನಾಂಗಗಳು ಬ್ರೆಝಿಲ್ ನಲ್ಲಿ ಇದ್ದವು ಎನ್ನುವುದಕ್ಕೆ ದಾಖಲಿಯಿದೆ. ಅವರೆಲ್ಲ ಸುಮಾರು ಐವತ್ತು ಸಾವಿರ ವರ್ಷದ ಹಿಂದೆ ಈ ನೆಲಕ್ಕೆ ಬಂದರು ಎನ್ನಲಾಗುತ್ತದೆ. ಯುರೋಪಿಯನ್ನರು ಬ್ರೆಝಿಲ್ ಗೆ ಬಂದದ್ದು ಹದಿನಾಲ್ಕನೇ ಶತಮಾನ, ಈಗಿನಿಂದ 522 ವರ್ಷ ಹಿಂದೆ. ಆಗಲೇ ಶುರುವಾದ ಯುರೋಪಿಯನ್ ಮತ್ತು ಅಮೆಜಾನ್ ಬುಡಕಟ್ಟು ಜನಾಂಗದ ನಡುವಿನ ಯುದ್ಧ ಇಂದಿನವರೆಗೆ ನಾನಾ ರೀತಿ, ಸ್ವರೂಪಗಳನ್ನು ಪಡೆದು ಮುಂದುವರಿದುಕೊಂಡೆ ಬಂದಿದೆ.

ಮೊದಲು ಬಂದ ಪೋರ್ಚುಗೀಸರ ವಿರುದ್ಧ ಯುದ್ಧಕ್ಕೆ ನಿಂತವರೆಂದರೆ ತುಪಿನಂಬಾ ಬುಡಕಟ್ಟಿನವರು. ಈ ಯುದ್ಧ ಎರಡು ವರ್ಷಗಳ ಕಾಲ ನಡೆಯಿತು. ಕೊನೆಗೆ ಆ ಜನಾಂಗ ಸೋತು ಮಂಡಿಯೂರಿತು. ನಂತರ ಐಮೋರ್ ಎನ್ನುವ ಇನ್ನೊಂದು ಜನಾಂಗ ಪೋರ್ಚುಗೀಸರ ವಿರುದ್ಧ ಸುಮಾರು ನೂರಿಪ್ಪತ್ತು ವರ್ಷ ಕಾದಾಡಿ ನಂತರ ಸೋತಿತು.

ಹೀಗೆ ಸೋತವರನ್ನು ಪೋರ್ಚುಗೀಸರು ಮತಾಂತರಿಸಿ ಆ ನೆಲಕ್ಕೆ ಆಕ್ರಮಣಕ್ಕೆ ಬರುತ್ತಿದ್ದ ಬ್ರಿಟೀಷರು, ಫ್ರೆಂಚರನ್ನು ಸದೆಬಡಿಯಲು ಯುದ್ಧದಲ್ಲಿ ಆಳಾಗಿ ಬಳಸಿಕೊಳ್ಳುತ್ತಿದ್ದರು. ಮನವೊ, ಗೌರಾನಿ ಹೀಗೆ ನೂರಾರು ಕಾಡು ಜನಾಂಗ ನಿರಂತರ ಹೋರಾಡಿ ಸೋತು ಅಂದಿನ 2000 ಜನಾಂಗಗಳಲ್ಲಿ ಇಂದು ಉಳಿದುಕೊಂಡದ್ದು 350 ಜನಾಂಗ ಮಾತ್ರ. ಅದರಲ್ಲಿ 290 ಜನಾಂಗ ಅದಾಗಲೇ ಹೊರಜಗತ್ತಿಗೆ ತೆರೆದುಕೊಂಡಿದೆ ಮತ್ತು ಜೊತೆಯಲ್ಲಿ ತಮ್ಮ ಬದುಕನ್ನು ಪ್ರತ್ಯೇಕವಾಗಿಯೇ ನಡೆಸಿ ಕೊಂಡು ಹೋಗುತ್ತಿವೆ.



ಅಮೆಜಾನ್ ಕಾಡಿನ ಬಗ್ಗೆ ಕಳೆದ ಒಂದು ದಶಕದಿಂದ ಒಂದೇ ಒಂದು ಒಳ್ಳೆಯ ಸುದ್ದಿ ಕೇಳಿದ್ದಿಲ್ಲ. ಮೊದಲನೆಯದು ತೀವ್ರಗತಿಯ ಕಾಡಿನ ನಾಶ. ಇಷ್ಟೊಂದು ದೊಡ್ಡ ಕಾಡು ಕಳೆದ ಕೆಲ ವರ್ಷದಿಂದ ಈಚೆ ಪ್ರತೀ ವರ್ಷ ಶೇ. 1 ರಷ್ಟು ಕಡಿಮೆಯಾಗುತ್ತಿದೆ. ಕಳೆದ ಐದು ದಶಕದಲ್ಲಿ ಶೇ.20 ಸಸ್ಯ ಸಂಪತ್ತು ನಾಶವಾಗಿದೆ ಎನ್ನುವ ಅಜಮಾಸು ಲೆಕ್ಕ. ಎರಡನೆಯದು ಈ ಕಾಡಿನ ನಾಶದ ಜೊತೆ ನಾಶವಾಗುವ ಅಥವಾ ಆಧುನಿಕತೆಯ ಇತ್ತಕಡೆ ದಾಟಿಬರುವ ಈ ಬುಡಕಟ್ಟು ಜನಾಂಗಗಳು, ಬದುಕು. ಇದರಿಂದ ಕಾಡು ಇನ್ನಷ್ಟು ನಾಶಕ್ಕೆ ತೆರೆದುಕೊಳ್ಳುತ್ತಿದೆ.

2000 ಇದ್ದ ಕಾಡು ಜನಾಂಗ ಇಂದು 350 ಕ್ಕೆ ಬಂದಿದೆ ಎಂದೆನಲ್ಲ, ಅದರಲ್ಲಿ ಈ ಕಾಡಿನ ಅಂಚಿನಲ್ಲಿಲ್ಲದ, ಕಾಡಿನ ತೀರಾ ಒಳಕ್ಕೆ ಇರುವ 60 ಕಾಡು ಜನಾಂಗ ಇಂದಿಗೂ ಸುರಕ್ಷಿತವಾಗಿಯೇ ಉಳಿದು ಕೊಂಡಿದೆ. ಅವರ ಸರದಿ ಬರಲು ಇನ್ನೂ ಸಮಯ ಬೇಕು. ಆದರೆ ಈ ಅಂಚಿನಲ್ಲಿರುವ ಜನಾಂಗಗಳದ್ದು ಇಂದಿನ, ಕೆಲ ಶತಮಾನಗಳ ನಿರಂತರ ಯುದ್ಧ, ಘರ್ಷಣೆ. ಇವರೆಲ್ಲ ಇರುವುದು ಕಾಡಿನ ಅಂಚಿನಲ್ಲಿ, ಆಧುನಿಕ ನಾಡಿಗೆ ತಾಗಿ. ಇಂದು ಮಾಫಿಯಾ, ಅದರ ಆಣತಿಯಂತೆ ನಡೆಯುವ ಸರಕಾರ ಹೊಡೆದು ಬಡಿದು ಅವರಿಂದ ಅವರ ನೆಲ, ಕಾಡನ್ನು ಕಿತ್ತುಕೊಳ್ಳುತ್ತಿದೆ.

ಇನ್ನು ಕ್ರಿಶ್ಚನ್ ಮಿಷನರಿಗಳಿಗೆ ಅವರನ್ನು ಆದಷ್ಟು ಬೇಗ ಮತಾಂತರಿಸುವ ಗಡಿಬಿಡಿ. ಇದೆಲ್ಲದರ ನಡುವೆ ತಮ್ಮತನ, ತಮ್ಮ ಜೀವನ ರೀತಿಯನ್ನು ಕಾಪಾಡಿಕೊಳ್ಳುವ ಹೊಡೆದಾಟದ ಬದುಕು ಈ ಬುಡಕಟ್ಟು ಜನಾಂಗದವರದ್ದು. ಈ ಅಂಚಿನಲ್ಲಿರುವ ಬುಡಕಟ್ಟು ಜನಾಂಗದ ತೀವ್ರ ವಿರೋಧ ಬ್ರೆಝಿಲ್ ನ ಮಾಫಿಯಾ ಮತ್ತು ಸರಕಾರವನ್ನು ಕಾಡು ಹೊಕ್ಕದಂತೆ ಹಲವು ಕಡೆ ಅಡ್ಡಿಯಾಗಿ ನಿಂತಿವೆ. ಈ ಬುಡಕಟ್ಟು ಜನ ಹೀಗಾಗಿ ಅರಣ್ಯ ರಕ್ಷಕರು.

ಈ ಕಾಡಿನ ಕೊಳ್ಳೆಗೆ ತಡೆಯಾಗಿ ನಿಂತಿರುವ ಈ ಗಡಿಯಂಚಿನ ಬುಡಕಟ್ಟಿನವರನ್ನು ಹೇಗಾದರೂ ಮಾಡಿ, ವ್ಯವಸ್ಥಿತಯವಾಗಿ ಸದೆಬಡಿಯಬೇಕೆಂದು ಬ್ರೆಝಿಲ್ ಸರಕಾರ ಈಗ ಐದು ವರ್ಷದ ಹಿಂದೆ ಹೊಸತೊಂದು ಕಾನೂನನ್ನು ಜಾರಿಗೆ ತಂದಿತ್ತು. ಅದರ ಪ್ರಕಾರ ಯಾರ ಬಳಿ ಅವರಿರುವ ಜಾಗದ ಕಾಗದ ಪತ್ರ ಇಲ್ಲವೋ ಅವರೆಲ್ಲ ಕಾಡನ್ನು ಬಿಡಬೇಕು, ಅದು ಸರಕಾರದ ಆಸ್ತಿ. ಇಂತಹದ್ದೊಂದು ಕಾನೂನು ಜಾರಿಯಾಗುತ್ತಿದೆ ಎಂಬ ಸುದ್ದಿ ತಿಳಿದ ಈ ಗಡಿನಾಡಿನ ಬುಡಕಟ್ಟಿನವರು ಆಗ ಸಾವಿರದ ಲೆಕ್ಕದಲ್ಲಿ ಬ್ರೆಝಿಲ್ ನ ಸಂಸತ್ತಿನ ಮೇಲೆ ಮುಗಿಬಿದ್ದಿದ್ದರು, ಸುದ್ದಿಯಾಗಿತ್ತು.

ಇದೆಲ್ಲ ಖದೀಮತನಕ್ಕೆ ಚಾಲನೆ ಕೊಟ್ಟದ್ದು ಅಲ್ಲಿನ ಅಧ್ಯಕ್ಷ ಜೈರ್ ಬಾಲ್ಸನಾರೋ. ಆತ ಈ ಕಾನೂನನ್ನು ಶತಾಯ ಗತಾಯ ಜಾರಿಗೆ ತಂದೇ ತೀರುತ್ತೇನೆ ಎಂದು ಹೊರಟವ. ಇದಷ್ಟೇ ಅಲ್ಲ, ಅಲ್ಲಿನ ಬುಡಕಟ್ಟು ಜನಾಂಗವನ್ನು ಕಾಪಾಡುತ್ತಿದ್ದ ಎಫ್‌ಯುಎನ್‌ಎಐ ಎನ್ನುವ ಗಟ್ಟಿ ಸಂಸ್ಥೆಯೊಂದಿತ್ತು. ಇದರಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಬುಡಕಟ್ಟು ಜನಾಂಗದ, ಕಲಿತ, ಬಹಳಷ್ಟು ಹೋರಾಟಗಾರರಿದ್ದರು.

ಅಧ್ಯಕ್ಷ ಬಾಲ್ಸನಾರೋ ಈ ಸಂಸ್ಥೆಗೆ ಸಂದಾಯವಾಗುತ್ತಿದ್ದ ಹಣವನ್ನೆಲ್ಲ ನಿಲ್ಲಿಸಿಬಿಟ್ಟ. ಸರಕಾರದ ವಿರುದ್ಧವೇ ಚಟುವಟಿಕೆ ಮಾಡುವವರಿಗೆ ಸರಕಾರ ಏಕೆ ಹಣ ಕೊಡಬೇಕು ಎಂದು ಪ್ರಶ್ನಿಸಿದ. ನೋಡನೋಡುತ್ತಲೇ ಆ ಸಂಸ್ಥೆ ಹಲ್ಲು ಕಿತ್ತ ಹವಾಯಿತು. ಇದರಿಂದ ಸರಕಾರ, ಮಾಫಿಯಾ ಮತ್ತು ಭೂಕಬಳಿಕೆ ಮಾಡುವವರನ್ನು ಕೇಳುವವರೇ ಇಲ್ಲದಂತಾಯಿತು.

ನಾವು ರಸ್ತೆಯಲ್ಲಿ ಪ್ರಯಾಣಿಸುವಾಗ ರಸ್ತೆ ಬದಿಯಲ್ಲಿ ಊರೇ ಅಲ್ಲದಂತಹ ಜಾಗದಲ್ಲಿ ಇಂದು ನೂರಾರು ಗುಡಿಸಲುಗಳು, ಕುಟುಂಬಗಳು ಕಾಣಿಸಿಕೊಳ್ಳುತ್ತವೆ. ಇವರೆಲ್ಲ ಅಲ್ಲಿನ ಸರಕಾರ ಕಾಡಿನಿಂದ ಓಡಿಸಿ ನೆಲೆ ಕಳೆದುಕೊಂಡವರು. ಅವರು ಹಗಲಲ್ಲಿ ಹೈವೇಗಳಲ್ಲಿ ಬಂದು ನಿಂತು ಆಹಾರಕ್ಕೆ, ನೀರಿಗೆ, ಹಣಕ್ಕೆ ಬೇಡುತ್ತಾರೆ.

ರಾತ್ರೆಯಾಯಿತೆಂದರೆ ಆ ರಸ್ತೆಗಳಲ್ಲಿ ಸಂಚರಿಸಬಾರದು ಎಂಬ ಅಲಿಖಿತ ನಿಯಮ. ಏಕೆಂದರೆ ಅವರೇ ಅಡ್ಡ ಹಾಕಿ ಸುಲಿಗೆ ಮಾಡುತ್ತಾರೆ. ಇದೆಲ್ಲದಕ್ಕೆ ಕಾರಣವೇನು, ಏಕೆ ಹೀಗಾಯಿತು, ಏಕೆ ಈ ಸುಲಿಗೆ ನಡೆಯುತ್ತಿದೆ ಎಂಬ ಮೂಲ ಪ್ರಶ್ನೆಗೆ ಉತ್ತರ ಈಗ ನಿಮಗೆ ಗೊತ್ತಿದೆ. ಒಟ್ಟಾರೆ ಇಂದು ಬ್ರೆಜಿಲ್ ನ ಮೂಲ ನಿವಾಸಿಗಳು, ಬುಡಕಟ್ಟಿನವರು ಅವರದೇ ನೆಲದಲ್ಲಿ ಅತಂತ್ರರಾಗಿ ಅಸಾಧ್ಯ ಸ್ಥಿತಿಗೆ ಬಂದು ನಿಂತಿದ್ದಾರೆ. ಅದೆಷ್ಟೋ ಲಕ್ಷ ಮಂದಿ ಕಾಡಿಲ್ಲದೆ, ನಾಡಿಗೂ ಸೇರದೇ ತಮ್ಮ ನೆಲದಲ್ಲಿಯೇ ಪರಕೀಯರಂತೆ ಬದುಕುತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ವೋಟಿಂಗ್ ವ್ಯವಸ್ಥೆಯೊಳಕ್ಕೆ ಇನ್ನೂ ಬಾರದಿರುವುದರಿಂದ ರಾಜಕೀಯವಾಗಿ ಅವರೆಲ್ಲ ದುರ್ಬಲರು, ಲೆಕ್ಕಕ್ಕಿಲ್ಲದವರು.

ಒಂದೊಳ್ಳೆ ಸುದ್ದಿಯೆಂದರೆ ಕಳೆದ ತಿಂಗಳು ಜೈರ್ ಬಾಲ್ಸನಾರೋ ಚುನಾವಣೆಯಲ್ಲಿ ಸೋತಿದ್ದಾನೆ. ಇದು ಕೊಡುವ ಸಮಾಧಾನಕ್ಕಿಂತ ಈಗ ಆರಿಸಿ ಬಂದಿರುವ ಲೂಯಿಸ್ ಡಾ ಸಿಲ್ವಾ ಒಂದಿಷ್ಟು ಭರವಸೆಯನ್ನು ಹುಟ್ಟಿಹಾಕಿದ್ದಾನೆ. ಆತ ಮೊದಲಿನಿಂದ ಹೇಳಿಕೊಂಡು ಬಂದದ್ದು ಎರಡನ್ನು. ಮೊದಲನೆಯದು ಅಮೆಜಾನ್ ಕಾಡನ್ನು ಸಂರಕ್ಷಿಸುವುದು. ಎರಡನೆಯದು ಅಲ್ಲಿನ ಕಾಡು, ಬುಡಕಟ್ಟಿನವರನ್ನು ಅವರಷ್ಟಕ್ಕೆ ಅವರಿಗಿರಲು ಅವಕಾಶ ಮಾಡಿಕೊಡುವುದು.

ಬ್ರೆಝಿಲ್ ಕಾಡುಜನರದ್ದು ಹೊರಜಗತ್ತಿನವರೊಂದಿಗೆ ಐನೂರು ವರ್ಷದ ಯುದ್ಧ. ಇದರಲ್ಲಿ ಸತ್ತವರ, ನಿರ್ಗತಿಕರಾದವರ ಯಾವುದೇ ಲೆಕ್ಕವಿಟ್ಟವರು ಯಾರೂ ಇಲ್ಲ. ಪ್ರತೀ ಆಕ್ರಮಣದಲ್ಲೂ ನಶಿಸಿಹೋಗುವ ಭಾಷೆ, ಸಂಸ್ಕೃತಿ, ಕಲೆಗೆ ಕೂಡ ಲೆಕ್ಕವಿಲ್ಲ. ಇದು ನಿಲ್ಲಬೇಕಿದೆ. ಅಮೆಜಾನ್ ಎಂದರೆ ಅದು ಜಗತ್ತಿನ ಶ್ವಾಸಕೋಶ. ಅಮೆಜಾನ್ ನಾಶವೆಂದರೆ ಅದು ಹೆಚ್ಚುಕಡಿಮೆ ಭೂಮಿಯ ನಾಶ. ಅದರ ಪರಿಣಾಮ ಜಗತ್ತಿನ ಎಲ್ಲರ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ತಟ್ಟಿಯೇ ತಟ್ಟುತ್ತದೆ. ಆದರೆ ಅದು ಅಷ್ಟು ಸುಲಭದ ಕೆಲಸವಲ್ಲ.

ಅಲ್ಲಿನ ಮಾಫಿಯಾವನ್ನು, ಕಾಡುಗಳ್ಳರನ್ನು ನಿಯಂತ್ರಿಸುವುದು ನಾಡಿನ ಸರಕಾರಕ್ಕಂತೂ ಅಸಾಧ್ಯವೇ ಹೌದು. ಏಕೆಂದರೆ ಕಾಡು ಅಷ್ಟು ದೊಡ್ಡದು. ಇದರ ರಕ್ತ ಹೀರಲು, ಮರಕ್ಕೆ, ಅಲ್ಲಿನ ಖನಿಜಕ್ಕೆ, ಅಪರೂಪದ ಪ್ರಾಣಿಗಳಿಗೆ, ಅದರ ಚರ್ಮ, ಕೊಂಬು, ಉಗುರು ಇತ್ಯಾದಿಯನ್ನು ಕದ್ದು ಮಾರುವ ಸುಮಾರು 600 ಗ್ಯಾಂಗ್‌ಗಳು ಇಂದು ಬ್ರೆಝಿಲ್ ನಲ್ಲಿಯೇ ಸಕ್ರೀಯವಾಗಿವೆ. ಅವು ವ್ಯವಸ್ಥೆಯ ಭಾಗವೇ ಆಗಿಹೋಗಿದೆ. ಇದೆಲ್ಲ ಕಳ್ಳಸಾಗಾಣಿಕೆಗೆ ವ್ಯವಸ್ಥಿತ ರಫ್ತು ಸಾವಿರದೆಂಟು ಮಾರ್ಗಗಳಿವೆ. ಒಂದು ವೀರಪ್ಪನ್ ನನ್ನೇ ಹಿಡಿಯಲು ನಮಗೆ ಅದೆಷ್ಟೋ ದಶಕ ಬೇಕಾಯಿತು. ಇಲ್ಲಿ ಅಂತಹ ಲಕ್ಷ ವೀರಪ್ಪನ್ ಗಳಿದ್ದಾರೆ. ಇದು ಬ್ರೆಝಿಲ್ ಸರಕಾರವನ್ನು ಮೀರಿ ಬೆಳೆದಾಗಿದೆ. ಈ ಗ್ಯಾಂಗುಗಳ ಬಳಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿವೆ, ಯಥೇಚ್ಛ ಹಣ, ರಾಜಕೀಯ ಬೆಂಬಲ ಎಲ್ಲವೂ ಇದೆ.

ಕಾಡು ಜನರ ಐನೂರು ವರ್ಷದ ಯುದ್ಧದಲ್ಲಿ ಸೋಲು ಮಾತ್ರ ಖಚಿತ. ಈ ಸೋಲು ಯಾರೊಬ್ಬರ ಗೆಲುವೂ ಆಗುವುದಿಲ್ಲ ಎನ್ನುವುದು ಕೂಡ ಅಷ್ಟೇ ಸತ್ಯ. ಇಂದು ಅಮೆಜಾನ್ – ಜಗತ್ತಿನ ಶ್ವಾಸಕೋಶಕ್ಕೆ ಕ್ಯಾನ್ಸರ್ ಉಲ್ಬಣಿಸಿ ಕೆಲ ದಶಕವೇ ಸರಿದಿದೆ. ಕಾಡುಜನರು ಬಳಲಿದ್ದಾರೆ. ಕಾಡು ಕೂಡ ಬಸವಳಿದಿದೆ.

**– ಶಿಶಿರ್** ಹೆಗಡೆ

# ಯೋಚಿಸದೇ ಸುಮ್ಮನಿರುವುದೂ ಒಂದು ಭಾಗ್ಯ!

> **ನಾವೆಲ್ಲರೂ ಯೋಚಿಸುವುದಕ್ಕೆ ಸರ್ವಥಾ ಅರ್ಹರು. ಪ್ರಕೃತಿ ನಮಗೆ ನೀಡಿರುವ ಅತ್ಯಂತ ಸುಂದರವಾದ ವರಗಳಲ್ಲಿ ಯೋಚನಾ ಶಕ್ತಿಯೂ ಒಂದು. ಕೇವಲ ಒಂದು ಸಂಗತಿಯ ಕುರಿಯಾದ ಯೋಚನೆಯಲ್ಲ, ಯೋಚನೆಗಳ ಜಾಲವನ್ನೇ ನಾವು ಸೃಷ್ಟಿಸಬಲ್ಲೆವು. ಅಷ್ಟು ಅದ್ಭುತವಾದ ಶಕ್ತಿಯನ್ನು ನಿಸರ್ಗ ನಮ್ಮ ಪಾಲಿಗೆ ದಯ ಪಾಲಿಸಿದೆ.**



ನಾವೆಲ್ಲರೂ ಯೋಚಿಸುವುದಕ್ಕೆ ಸರ್ವಥಾ ಅರ್ಹರು. ಪ್ರಕೃತಿ ನಮಗೆ ನೀಡಿರುವ ಅತ್ಯಂತ ಸುಂದರವಾದ ವರಗಳಲ್ಲಿ ಯೋಚನಾ ಶಕ್ತಿಯೂ ಒಂದು. ಕೇವಲ ಒಂದು ಸಂಗತಿಯ ಕುರಿಯಾದ ಯೋಚನೆಯಲ್ಲ, ಯೋಚನೆಗಳ ಜಾಲವನ್ನೇ ನಾವು ಸೃಷ್ಟಿಸಬಲ್ಲೆವು. ಅಷ್ಟು ಅದ್ಭುತವಾದ ಶಕ್ತಿಯನ್ನು ನಿಸರ್ಗ ನಮ್ಮ ಪಾಲಿಗೆ ದಯ ಪಾಲಿಸಿದೆ.

ಅಷ್ಟರ ಮಟ್ಟಿಗೆ ಭಾಗ್ಯವಂತರು ನಾವು. ಹೀಗೆ ಯೋಚನೆಗಳನ್ನು ಅಸ್ಖಲಿತವಾಗಿ ಮಾಡಿದ ಕಾರಣಕ್ಕಾಗಿಯೇ ನಾವೆ ಬುದ್ಧಿವಂತರು ಎನಿಸಿಕೊಂಡಿದ್ದು. ಅಥವಾ ಬೌದ್ಧಿಕ ಜಾಣ್ಮೆಯನ್ನು ಮೈಗೂಡಿಸಿಕೊಂಡಿದ್ದು. ಪರಿಣಾಮವಾಗಿ ಸೂರ್ಯನ ಗಾತ್ರವನ್ನೂ ಊಹಿಸಿದ್ದೇವೆ, ನಕ್ಷತ್ರಗಳ ರಚನೆಯನ್ನೂ ಅರಿತಿದ್ದೇವೆ. ಅಷ್ಟೇ ಏಕೆ ಬಾಹ್ಯಾಕಾಶದಲ್ಲಿಯೇ ಹಾರಾಡುತ್ತಾ ಬದುಕುವುದು ಹೇಗೆ ಎನ್ನುವುದನ್ನೂ ಅಧ್ಯಯನ ಮಾಡಿಯಾಗಿದೆ. ಇದೆಲ್ಲವೂ ಯೋಚನೆಯೊಂದು ಮೊದಲಿಗೆ ಮೊಳಕೆಯೊಡೆದ ಪರಿಣಾಮವೇ. ಅಯ್ಯೋ ಅದೆಲ್ಲ ಬಿಡಿ, ಭೂಮಿಯ ಮೇಲಣ ಸಾಗರದ ಮೊರೆತಕ್ಕೂ, ಚಂದ್ರನ ತಿರುಗುವ ಆವೇಗಕ್ಕೂ ಸಂಬಂಧವನ್ನೇ ಹುಡುಕಿದ್ದೇವೆ. ಉಳಿದಿದ್ದೇನು ಮಹಾ!

ಅಂದರೆ ಈ ಯೋಚನೆಯ ಬಲದಿಂದಲೇ ನಾವು ನಾಗರಿಕತೆಯ ಮೆಟ್ಟಿಲುಗಳನ್ನು ಹತ್ತಿರುವುದು, ಹತ್ತುತ್ತಿರುವುದು. ಅಬ್ಬೇಪಾರಿಯಾಗಿ ಅಂಡಲೆಯುತ್ತಿದ್ದ ಮನುಷ್ಯನೆಂಬ ಪ್ರಾಣಿಯಿಂದ ಮಾನವ ರಾಗಿ ಉನ್ನತಿ ಹೊಂದುವವರೆಗೆ ಸವೆಸಿದ ಹಾದಿಯೆಲ್ಲವೂ ಯೋಚನೆಯ ರಿಸಲ್ಟುಗಳೇ. ಕೃಷಿ ಮಾಡುವುದನ್ನು ಕಲಿತೆವು, ಆಹಾರ ಬೇಯಿಸಿಕೊಳ್ಳುವುದನ್ನು ಕರಗತ ಮಾಡಿಕೊಂಡೆವು. ನಗ-ನಾಣ್ಯ, ಒನಪು-ವಯ್ಯಾರ, ಕಲೆ-ಕಾವ್ಯ ಪ್ರತಿಯೊಂದನ್ನೂ ಕೂಡ ರೂಢಿಸಿಕೊಂಡೆವು.



ಮುಂದುವರಿದು ಇವತ್ತಿಗೆ ಯೋಚನೆ ಮಾಡುವುದಕ್ಕೆ ಅಂತಲೇ ಮತ್ತೊಂದು ಯಂತ್ರವನ್ನು ತಯಾರಿಸುವಷ್ಟರ ಮಟ್ಟಿಗೆ ಬಂದು ಮುಟ್ಟಿದ್ದೇವೆ. ಭೂಗೋಳದಿಂದ ಖಗೋಳದವರೆಗೆ ಆವಿಷ್ಕರಿಸಿದ ಎಲ್ಲದರ ಮೂಲಧಾತು-ಹೇತು ಒಂದು ಸಣ್ಣ ಯೋಚನೆಯ ಎಳೆಯೇ. ಒಮ್ಮೆ ಹೊರನಿಂತು ನೋಡಿದರೆ ಎಂತಹ ಅದ್ಭುತ! ಆದರೆ ಇಂಥದ್ದೊಂದು ವರ ಕೆಲವೊಮ್ಮೆ ಶಾಪವಾಗಿಯೂ ಪ್ರತಿಕೂಲತೆ ತೋರುತ್ತದಾ ಎಂಬ ಭಾವನೆ ಬರಿಸುವುದು ಸುಳ್ಳಲ್ಲ. ಅದರಲ್ಲೂ ಮಾನಸಿಕ ಪ್ರಪಂಚದ ಪರಿಧಿಯೊಳಗೆ ಇದು ಏಕ್ ದಂ ಶಾಪವಾಗಿಯೇ ಉಲ್ಟಾ ಹೊಡೆಯುತ್ತಿದೆಯಾ ಎನಿಸುತ್ತದೆ.

ಮುಗಿಯದಷ್ಟು ವಿಷಯಗಳು, ತಳಕಾಣದ ರೀಲ್ಸ್ ಸ್ಕ್ರಾಲ್‌ಗಳು, ಒಪಿನಿಯನ್ನುಗಳು, ನೋಟಿ ಫಿಕೇಷನ್ನುಗಳು, ಮತ್ತೆಂತದೋ ತರಹೇವಾರಿ ಸದ್ದಿನ ನಡುವೆ ನಮ್ಮ ತಲೆ ವಿರಾಮ ತೆಗೆದು ಕೊಳ್ಳುವುದನ್ನೇ ಮರೆತು ಬಿಟ್ಟಿದೆ. ಸದಾ ಒಂದಿಂದು ವಿಷಯ ಯೋಚಿಸುತ್ತಲೇ ಇರುವುದು ಮಾತ್ರ ಜೀವನ ಎನ್ನುವುದು ನಾರ್ಮಲ್ ಆಗಿಬಿಟ್ಟಿದೆ. ಈಗೊಂದು ನಾಲ್ಕಾರು ದಿನಗಳ ಕೆಳಗೆ, ಒಂದ್ಸಲ ಧ್ಯಾನ ಮಾಡಿ ನೋಡುವ ಮನಸ್ಸಾಯಿತು. ಒಂದು ಕೈ ನೋಡಿಯೇ ಬಿಡೋಣ ಎಂದು ಧ್ಯಾನಕ್ಕೆ ಕೂತೆ. ಮೂರೇ ಉಸಿರು. ಮುಂದೆ ನನ್ನ ಬಳಿ ಏಕಾಗ್ರತೆ ಸಾಧಿಸಲು ಸಾಧ್ಯವೇ ಆಗಲಿಲ್ಲ. ಆದರೆ ಹಿಡಿದ ಪಟ್ಟು ಬಿಡಲಿಲ್ಲ, ಮತ್ತೆ ಮರುದಿನಕ್ಕೆ ಒಂದೈದು ನಿಮಿಷದ ಹೊಯ್ದಾಟದ ಬಳಿಕ ಉಸಿರನ್ನು ಗಮನಿಸುವ ಹಂತಕ್ಕೆ ಬಂದೆ.

ಅಷ್ಟೇ, ಯೋಚನಾ ಪ್ರವಾಹಕ್ಕೆ ಬ್ರೇಕ್ ಎರಡೇ ದಿನಕ್ಕೆ ಮುಗಿಯಿತು. ಆದರೆ ಆ ಕೆಲವೇ ನಿಮಿಷಗಳ ಉಸಿರಿನ ಗಮನಿಸುವಿಕೆ ನನ್ನಂದು ವಿಚಿತ್ರ ನಿರ್ಲಿಪ್ತತೆಯನ್ನು ತಂದು ಹಾಕಿತ್ತು. ಆ ದಿನದ ಬೆಳಗು ಎಂದಿನಂತೆ ಸರಸರನೆ ಓಡಲೇ ಇಲ್ಲ. ಕೆಲಸದಲ್ಲಿ ಎಂದಿಗಿಂತ ತುಸು ಹೆಚ್ಚಿನ ತಾಳ್ಮೆಯನ್ನು ಸುರು ವಿತ್ತು. ಅಂದರೆ ನಮ್ಮ ಮೆದುಳಿಗೆ ಸಾವಕಾಶವಾಗಿ ನಿಂತು, ಒಂದರೆಹೊತ್ತು ವಿರಮಿಸುವುದು ಗೊತ್ತು. ಆದರೆ ನಾವೇ ಅದಕ್ಕೆ ಆಸ್ಪದ ಕೊಡುತ್ತಿಲ್ಲ.

ನಮ್ಮಲ್ಲಿ ಬಹಳಷ್ಟು ಆಲೋಚನೆಗಳಿವೆ. ಆದರೆ ಆ ಆಲೋಚನೆಗಳ ಮೇಲೆ ನನ್ನ ನಿಯಂತ್ರಣ ಎಷ್ಟು ಸಡಿಲವಾಗಿದೆ ಎನ್ನುವುದು ಮಾತ್ರ ಈಗ ಗೊತ್ತಾಗಿದ್ದಷ್ಟೇ. ನನ್ನ ಯೋಚನೆಗಳ ಉಗಿಬಂಡಿ ವಾಯುವೇಗದಲ್ಲಿ ಚಲಿಸುತ್ತಿರುತ್ತದೆ, ಆದರೆ ಯಾವುದೇ ನಿರ್ದಿಷ್ಟ ಗಮ್ಯವಿಲ್ಲದೇ- ಈ ಸತ್ಯ ತಿಳಿದದ್ದು ಮೊನ್ನೆ ಮೊನ್ನೆ ಮಾತ್ರ. ಆದರೆ ಅದನ್ನು ನಿಲ್ಲಿಸುವ ನಿಲ್ದಾಣ ಕಟ್ಟುವ ವಿಧಾನ ಮಾತ್ರ ಇನ್ನೂ ಸರಿಯಾಗಿ ಸ್ಪಷ್ಟವಾಗಿಲ್ಲ.

ಆಧುನಿಕ ಮನುಷ್ಯರಾಗಿ ನಾವು ವಿಚಲಿತರಾಗುವುದಕ್ಕೆ ಬಹಳಷ್ಟು ದಾರಿಗಳನ್ನು ಹೊಂದಿದ್ದೇವೆ. ಅದರಲ್ಲಿ ಡಾಕ್ಟರೇಟ್ ಪದವಿಯನ್ನೇ ಪಡೆದಿದ್ದೇವೆ. ಆದರೆ ಹಾಗೆ ವಿಚಲಿತರಾದಾಗ ಪುನಃ ಹಿಂದಕ್ಕೆ ಬರುವುದು ಹೇಗೆ ಎನ್ನುವುದರಲ್ಲಿ ಮಾತ್ರ ಇನ್ನೂ ಎಲ್.ಕೆ.ಜಿ. ಯನ್ನೂ ದಾಟಲಾಗಿಲ್ಲ. ಇಂಥ ಯೋಚನಾ ಲಹರಿಯನ್ನು ನಿಯಂತ್ರಿಸುವ ಕಲೆ ಸಿದ್ಧಿಸುವುದಕ್ಕೂ ಪುಣ್ಯ ಮಾಡಿರಬೇಕು. ಅದೇ ಯೋಚನೆ ಮಾಡಬಲ್ಲೆವು ಎನ್ನುವುದಕ್ಕಿಂತ ಬಹುದೊಡ್ಡ ವರ. ಏನಂತೀರಿ?

**– ಹರ್ಷ ಹೆಗಡೆ** ಕೊಂಡದಕುಳಿ

# ಸ್ವಾಭಿಮಾನವನ್ನು ಎಂದಿಗೂ ಬಿಡದ ಡಾಲಿ ಪಾರ್ಟನ್

> **ಟೆನ್ನೆಸ್ಸೀಯ ಸ್ಮೋಕಿ ಪರ್ವತಗಳ ನಡುವಿನ ಆ ಪುಟ್ಟ ಮರದ ಗುಡಿಸಲು, ವಿದ್ಯುತ್ ನೀರಿನ ಅನುಕೂಲವೂ ಅಲ್ಲಿ ಇರಲಿಲ್ಲ. ಚಳಿಗಾಲ ಬಂದರೆ ಬೆಚ್ಚಗಿರಲು ಮನೆಯ ಮೂರ್ನಾಲ್ಕು ಮಕ್ಕಳು ಒಂದೇ ಹಾಸಿಗೆಯಲ್ಲಿ ಮುದುರಿ ಮಲಗಬೇಕಾದಂತಹ ಕಡುಬಡತನ. 1946ರಲ್ಲಿ ಆ ಹೆಣ್ಣುಮಗಳು ಜನಿಸಿದಾಗ, ಅವಳ ತಂದೆಯ ಬಳಿ ವೈದ್ಯರಿಗೆ ಫೀಸ್ ಕಟ್ಟಲು ಹಣವಿರಲಿಲ್ಲ; ಬದಲಾಗಿ ಒಂದು ಚೀಲ ಜೋಳದ ಹಿಟ್ಟನ್ನು ನೀಡಿದ್ದರು. ಆಕೆಯೇ ಮುಂದೆ ಜಗತ್ಪ್ರಸಿದ್ಧ ಗಾಯಕಿಯಾದ ಡಾಲಿ ಪಾರ್ಟನ್.**



ಒಂದೊಳ್ಳೆ ಮಾತು ಟೆನ್ನೆಸ್ಸೀಯ ಸ್ಮೋಕಿ ಪರ್ವತಗಳ ನಡುವಿನ ಆ ಪುಟ್ಟ ಮರದ ಗುಡಿಸಲು, ವಿದ್ಯುತ್ ನೀರಿನ ಅನುಕೂಲವೂ ಅಲ್ಲಿ ಇರಲಿಲ್ಲ. ಚಳಿಗಾಲ ಬಂದರೆ ಬೆಚ್ಚಗಿರಲು ಮನೆಯ ಮೂರ್ನಾಲ್ಕು ಮಕ್ಕಳು ಒಂದೇ ಹಾಸಿಗೆಯಲ್ಲಿ ಮುದುರಿ ಮಲಗಬೇಕಾದಂತಹ ಕಡುಬಡತನ. 1946ರಲ್ಲಿ ಆ ಹೆಣ್ಣುಮಗಳು ಜನಿಸಿದಾಗ, ಅವಳ ತಂದೆಯ ಬಳಿ ವೈದ್ಯರಿಗೆ ಫೀಸ್ ಕಟ್ಟಲು ಹಣವಿರಲಿಲ್ಲ; ಬದಲಾಗಿ ಒಂದು ಚೀಲ ಜೋಳದ ಹಿಟ್ಟನ್ನು ನೀಡಿದ್ದರು. ಆಕೆಯೇ ಮುಂದೆ ಜಗತ್ಪ್ರಸಿದ್ಧ ಗಾಯಕಿಯಾದ ಡಾಲಿ ಪಾರ್ಟನ್.

ಬಡತನವಿದ್ದರೂ ಆಕೆಯ ಬಳಿ ದೈವದತ್ತವಾದ ಅದ್ಭುತ ಕಂಠವಿತ್ತು. ಹದಿಹರೆಯದ ತನ್ನ ಹಾಡುಗಳ ಗಂಟನ್ನು ಕಟ್ಟಿಕೊಂಡು, ಹಳೆಯ ದಾದ ಒಂದು ಸೂಟ್‌ಕೇಸ್ ಹಿಡಿದು ನ್ಯಾಶ್ವಿ ನಗರಕ್ಕೆ ಬಂದಾಗ ಎಲ್ಲರೂ ಅವಳನ್ನು ಹೀಯಾಳಿಸಿದರು. ನೀನೊಬ್ಬಳು ದಡ್ಡ ಸುಂದರಿ, ನಿನ್ನನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ, ವಾಪಸ್ ಊರಿಗೆ ಹೊರಟುಹೋಗು ಎಂದು ಮೂದಲಿಸಿದರು. ಆದರೆ ಅವಳು ಆ ಮಾತುಗಳಿಗೆ ಕಿವಿಗೊಡಲಿಲ್ಲ.

ಸಂಗೀತ ಲೋಕದ ದೊಡ್ಡ ಗುಟ್ಟೊಂದು ಆಕೆಗೆ ತಿಳಿದಿತ್ತು. ಹಣವಿರುವುದು ಕೇವಲ ಹಾಡುವುದರಲ್ಲಲ್ಲ, ಆ ಹಾಡಿನ ಮಾಲೀಕತ್ವವನ್ನು ಉಳಿಸಿ ಕೊಳ್ಳುವುದರಲ್ಲಿ ಎಂಬ ಸತ್ಯ ಆಕೆಗೆ ಅರಿವಾ ಗಿತ್ತು. ಹೀಗಾಗಿಯೇ ತನ್ನದೇ ಆದ ಪಬ್ಲಿಷಿಂಗ್ ಕಂಪನಿಯನ್ನು ಹುಟ್ಟು ಹಾಕಿದಳು. ತಾನು ಬರೆದ ಪ್ರತಿಯೊಂದು ಪದದ ಹಕ್ಕೂ ತನ್ನದೇ ಆಗಿರಬೇಕೆಂದು ನಿರ್ಧರಿಸಿದಳು.

1967ರಲ್ಲಿ ಪೋರ್ಟರ್ ವ್ಯಾಗನರ್ ಎಂಬ ಪ್ರಸಿದ್ಧ ಗಾಯಕ ತನ್ನ ಜನಪ್ರಿಯ ಟಿವಿ ಶೋನಲ್ಲಿ ಆಕೆಗೆ ಅವಕಾಶ ನೀಡಿದ. ಡಾಲಿಯ ವೃತ್ತಿಜೀವನಕ್ಕೆ ದೊಡ್ಡ ತಿರುವು ಸಿಕ್ಕಿತು. ಆದರೆ ಏಳು ವರ್ಷಗಳ ಕಾಲ ಆತನ ನೆರಳಿನ ಬೆಳೆದ ಆಕೆಗೆ, ತನ್ನದೇ ಆದ ಸ್ವತಂತ್ರ ಸಾಮ್ರಾಜ್ಯ ಕಟ್ಟುವ ಹಂಬಲ ಶುರುವಾಯಿತು.

ಪೋರ್ಟರ್ ಇದಕ್ಕೆ ಒಪ್ಪಲಿಲ್ಲ. ಆಗ ಆಕೆ ಒಂದೇ ದಿನದಲ್ಲಿ ಜೋಲೀನ್ ಮತ್ತು ನಾನು ಯಾವಾಗಲೂ ನಿನ್ನನ್ನು ಪ್ರೀತಿಸುತ್ತೇನೆ ಎಂಬ ಎರಡು ಅದ್ಭುತ ಗೀತೆಗಳನ್ನು ರಚಿಸಿದಳು. ಅದರಲ್ಲಿ ಎರಡನೆಯ ಹಾಡು ಕೇವಲ ಪ್ರೇಮ ಗೀತೆಯಾಗಿರಲಿಲ್ಲ; ಅದು ಪೋರ್ಟರ್‌ಗೆ ಆಕೆ ನೀಡಿದ ಕಾವ್ಯಾತ್ಮಕ ರಾಜೀನಾಮೆ ಪತ್ರವಾಗಿತ್ತು.

1974ರಲ್ಲಿ ಈ ಹಾಡು ಭಾರಿ ಜನಪ್ರಿಯವಾಯಿತು. ಆ ಜನಪ್ರಿಯತೆ ಎಷ್ಟಿತ್ತೆಂದರೆ, ಸಾಕ್ಷಾತ್ ಕಿಂಗ್ ಆಫ್ ರಾಕ್ ಆಂಡ್ ರೋಲ್ ಖ್ಯಾತಿಯ ಎಲ್ವಿಸ್ ಪ್ರೀಸ್ಲಿ ಆ ಹಾಡನ್ನು ತಾನು ಹಾಡಬೇಕೆಂದು ಆಸೆಪಟ್ಟ. ಗುಡಿಸಲಿನಲ್ಲಿ ಹುಟ್ಟಿದ ಡಾಲಿಗೆ ಇದಕ್ಕಿಂತ ದೊಡ್ಡ ಅದೃಷ್ಟ ಇನ್ನೇನಿದೆ? ಆದರೆ ರೆಕಾರ್ಡಿಂಗ್‌ನ ಹಿಂದಿನ ದಿನ ರಾತ್ರಿ ಎಲ್ವಿಸ್‌ನ ಮ್ಯಾನೇಜರ್ ಕರ್ನಲ್ ಟಾಮ್ ಪಾರ್ಕರ್ ಕರೆ ಮಾಡಿ, ಹಾಡಿನ ಶೇಕಡಾ 50ರಷ್ಟು ಹಕ್ಕುಗಳನ್ನು ನಮಗೆ ಬರೆದುಕೊಡಬೇಕು, ಇಲ್ಲದಿದ್ದರೆ ಎಲ್ವಿಸ್ ಹಾಡುವುದಿಲ್ಲ ಎಂಬ ಕಠಿಣ ಷರತ್ತು ವಿಧಿಸಿದ. ಅದು ಆಕೆಯ ಜೀವಮಾನದ ಕನಸು. ಆದರೆ, ಆಕೆ ತನ್ನ ಹಾಡಿನ ಹಕ್ಕನ್ನು ಬಿಟ್ಟುಕೊಡಲು ಸಿದ್ಧಳಿರಲಿಲ್ಲ.

ಭಾರವಾದ ಹೃದಯದಿಂದ, ಇಲ್ಲ ಎಂದುಬಿಟ್ಟಳು. ಎಲ್ವಿಸ್ ಆ ಹಾಡನ್ನು ಹಾಡಲಿಲ್ಲ. ಆ ರಾತ್ರಿಯಿಡೀ ಆಕೆ ಬಿಕ್ಕಿ ಬಿಕ್ಕಿ ಅತ್ತಳು. ಶೋ ಬಿಟ್ಟು ಬಂದಿದ್ದಕ್ಕಾಗಿ ಆಕೆಯ ಹಳೆಯ ಗುರು ಪೋರ್ಟರ್ ಕೂಡ 3 ಮಿಲಿಯನ್ ಡಾಲರ್ ಮೊಕದ್ದಮೆ ಹೂಡಿದ. ಎಲ್ಲವನ್ನೂ ಆಕೆ ಒಂಟಿಯಾಗಿ ಎದುರಿಸಿದಳು, ದಂಡ ಕಟ್ಟಿದಳು, ಆದರೆ ತನ್ನ ಸ್ವಾಭಿಮಾನವನ್ನು ಮಾತ್ರ ಬಿಟ್ಟುಕೊಡಲಿಲ್ಲ.

ಕಾಲ ಉರುಳಿತು. ಡಾಲಿ ತನ್ನದೇ ಸ್ವಂತ ಶ್ರಮದಿಂದ ಜಾಗತಿಕ ಬ್ರ್ಯಾಂಡ್ ಆಗಿ ಬೆಳೆದಳು. 1992ರಲ್ಲಿ ದಿ ಬಾಡಿಗಾರ್ಡ್ ಚಿತ್ರಕ್ಕಾಗಿ ಖ್ಯಾತ ಗಾಯಕಿ ವಿಟ್ನಿ ಹೂಸ್ಟನ್ ಆಕೆಯ ಅದೇ ಹಾಡನ್ನು ಹಾಡಿದಾಗ, ಅದು ಜಗತ್ತಿನಾದ್ಯಂತ ಹೊಸ ಇತಿಹಾಸವನ್ನೇ ಸೃಷ್ಟಿಸಿತು. ತನ್ನ ಹಾಡಿನ ಸಂಪೂರ್ಣ ಮಾಲೀಕತ್ವ ಉಳಿಸಿಕೊಂಡಿದ್ದ ಡಾಲಿಗೆ, ಆ ಒಂದೇ ಹಾಡು ಕೋಟ್ಯಂತರ ಡಾಲರ್ ಸಂಪತ್ತನ್ನು ತಂದುಕೊಟ್ಟಿತು. ಆಕೆ ಒಮ್ಮೆ ನಗುತ್ತಾ ಹೇಳಿದ್ದಳು, ಆ ಹಾಡಿನಿಂದ ಬಂದ ಹಣದಲ್ಲಿ ನಾನು ಎಲ್ವಿಸ್ ಪ್ರೀಸ್ಲಿಯ ಇಡೀ ಅರಮನೆಯನ್ನೇ ಖರೀದಿಸಬಲ್ಲೆ! ಎಂದು.

ಇಂದು ಅವಳು ನೂರಾರು ಮಿಲಿಯನ್ ಡಾಲರ್‌ಗಳ ಒಡತಿ. ತನ್ನದೇ ಆದ ಡಾಲಿವುಡ್ ಸಾಮ್ರಾಜ್ಯ ಕಟ್ಟಿದ್ದಾಳೆ. ತಂದೆಯ ನೆನಪಿನಲ್ಲಿ ಬಡಮಕ್ಕಳಿಗೆ ಕೋಟ್ಯಂತರ ಪುಸ್ತಕಗಳನ್ನು ಹಂಚಿದ್ದಾಳೆ.

ಜೀವನದಲ್ಲಿ ಬೆಳೆಯುವ ಸಲುವಾಗಿ ನಾವು ಅನೇಕ ಬಾರಿ ನಮ್ಮ ಸ್ವಾಭಿಮಾನದೊಂದಿಗೆ ರಾಜಿ ಮಾಡಿಕೊಂಡು ಬಿಡುತ್ತೇವೆ. ಕೆಲವೊಮ್ಮೆ ಇಷ್ಟವಿಲ್ಲದ ಕೆಲಸಗಳನ್ನು ಕೂಡ ಮಾಡಿ ಬಿಡುತ್ತೇವೆ. ಆದರೆ ಅಂತಹ ಬೆಳವಣಿಗೆಯಿಂದ ನಮ್ಮ ನಿಜವಾದ ಅಸ್ತಿತ್ವ ಇರುತ್ತದೆಯೇ ಯೋಚಿಸಬೇಕು. ನಮ್ಮ ಬಗ್ಗೆ ನಮಗೆ ಆತ್ಮವಿಶ್ವಾಸವಿದ್ದಾಗ, ಆತ್ಮ ಗೌರವವನ್ನು ನಾವು ಎಂದೂ ಕಳೆದುಕೊಳ್ಳುವುದಿಲ್ಲ. ಜೀವನದ ಯಾವ ನಿರ್ಧಾರವೂ ಕೂಡ ಮುಂದೆ ನಾವು ಪಶ್ಚಾತ್ತಾಪ ಪಡುವಂತೆ ಇರಬಾರದು. ಕೆಲವೊಮ್ಮೆ, ನಾವು ಹೇಳುವ ಒಂದು ಖಂಡಿತವಾದ ಇಲ್ಲ ಎಂಬ ಪದವೇ, ನಮ್ಮ ಭವಿಷ್ಯದ ಭದ್ರ ಬುನಾದಿಯಾಗಬಲ್ಲದು.

**– ರೂಪಾ** ಗುರುರಾಜ್

# ನೇರಳೆ ಹಣ್ಣಿನ ಬೀಜಗಳು ಮಧುಮೇಹ ನಿಯಂತ್ರಕ್ಕೆ ಸಹಕಾರಿ

ಮಧುಮೇಹ ಅಥವಾ ಡಯಾಬಿಟೀಸ್ (ಸಕ್ಕರೆ ಕಾಯಿಲೆ) ಈಗ ಎಲ್ಲೆಡೆ ಒಂದು ಸಾಮಾನ್ಯ ಸಂಗತಿಯಾಗಿದೆ. ನಮ್ಮ ಈಗಿನ ಆಹಾರ ಕ್ರಮ, ಜೀವನ ಶೈಲಿಯ ಕಾರಣದಿಂದ ನಮಗೆ ಮಧುಮೇಹ ಕಾಡುತ್ತಿದೆ. ಕೆಲವರಲ್ಲಿ ಅನುವಂಶಿಕವಾಗಿಯೂ ಇದು ಕಾಣಿಸಿಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ಮಧುಮೇಹ ನಿಯಂತ್ರಣಕ್ಕೆ ನೈಸರ್ಗಿಕ ಪರಿಹಾರಗಳತ್ತ ಜನರು ಹೆಚ್ಚು ಒಲವು ತೋರಿಸುತ್ತಿರುವಾಗ ನೇರಳೆ ಹಣ್ಣಿನ ಬೀಜ ಅಥವಾ ಜಾಂಬುಳ ಬೀಜ ಪ್ರಮುಖ ಸ್ಥಾನ ಪಡೆದುಕೊಳ್ಳುತ್ತಿದೆ. ನೇರಳೆ ಬೀಜಗಳಲ್ಲಿ ಇರುವ ಜಾಂಬೋಲಿನ್ ಮತ್ತು ಜಾಂಬೋಸಿನ್ ಸಂಯುಕ್ತಗಳು ಆಹಾರದಲ್ಲಿರುವ ಪಿಷ್ಟವನ್ನು ಸಕ್ಕರೆಯಾಗಿ ಪರಿವರ್ತಿಸುವ ಕ್ರಿಯೆಯನ್ನು ನಿಧಾನಗೊಳಿಸುತ್ತವೆ. ಇದರಿಂದ ಊಟದ ನಂತರ ರಕ್ತದಲ್ಲಿನ ಸಕ್ಕರೆ ಮಟ್ಟ ಏಕಾಏಕಿ ಏರಿಕೆಯಾಗುವುದನ್ನು ತಡೆಯಲು ಸಹಕಾರಿಯಾಗುತ್ತದೆ. ಹೀಗಾಗಿ ಮಧುಮೇಹಿಗಳಲ್ಲಿ ಸಕ್ಕರೆ ನಿಯಂತ್ರಣಕ್ಕೆ ಇದು ಸಹಾಯಕವಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ನೇರಳೆ ಬೀಜಗಳು ಪೌಷ್ಟಿಕಾಂಶಗಳ ದೃಷ್ಟಿಯಿಂದ ನೋಡಲು ಹೋದರೆ ಅತ್ಯಂತ ಸಮೃದ್ಧವಾಗಿವೆ. ಕಡಿಮೆ ಕ್ಯಾಲೋರಿ ಹೊಂದಿರುವ ಇವುಗಳಲ್ಲಿ ವಿಟಮಿನ್ ಸಿ, ಕಬ್ಬಿಣಾಂಶ, ಪೊಟ್ಯಾಸಿಯಮ್, ಮೆಗ್ನಿಸಿಯಮ್ ಹಾಗೂ ಫೈಬರ್ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿದೆ. ಇವು ದೇಹದ ಇನ್ಸುಲಿನ್ ಸ್ಪಂದನಶೀಲತೆಯನ್ನು ಸುಧಾರಿಸಲು ನೆರವಾಗುತ್ತವೆ. ಜೊತೆಗೆ ದೇಹದ ಚಯಾಪಚಯ ಕ್ರಿಯೆಯನ್ನು ವೇಗಗೊಳಿಸಿ. ಒಟ್ಟಾರೆ ಆರೋಗ್ಯವನ್ನು ಉತ್ತಮಗೊಳಿಸುವಲ್ಲಿ ಸಹಾಯಕವಾಗುತ್ತವೆ.

ನೇರಳೆ ಬೀಜದ ಪುಡಿಯನ್ನು ಬಳಸುವ ವಿಧಾನವೂ ಸರಳವಾಗಿದೆ. ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಒಂದು ಲೋಟ ಉಗುರು ಬೆಚ್ಚಗಿನ ನೀರಿಗೆ ಅರ್ಧ ಚಮಚ ನೇರಳೆ ಬೀಜದ ಪುಡಿಯನ್ನು ಬೆರೆಸಿ ಸೇವಿಸುವುದು ಉತ್ತಮ ಎಂದು ಆಯುರ್ವೇದ ತಜ್ಞರು ಅಭಿಪ್ರಾಯ ಪಡುತ್ತಾರೆ.

ಮಧ್ಯಾಹ್ನ ಹಾಗೂ ರಾತ್ರಿ ಊಟಕ್ಕೆ ಸುಮಾರು 30 ನಿಮಿಷಗಳ ಮೊದಲು ಇದನ್ನು ಸೇವಿಸಿದರೆ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಣದಲ್ಲಿಡಲು ನೆರವಾಗುತ್ತದೆ. ಅಲ್ಲದೆ, ಸಲಾಡ್, ಮೊಸರು ಅಥವಾ ಓಟ್ಸ್‌ಗಳ ಮೇಲೆ ಸ್ವಲ್ಪ ಪುಡಿಯನ್ನು ಸಿಂಪಡಿಸಿ ಸೇವಿಸುವುದರಿಂದ ದೈನಂದಿನ ಆಹಾರದಲ್ಲೇ ಇದನ್ನು ಸೇರಿಸಿಕೊಳ್ಳಬಹುದು. ಪ್ರಮುಖ ವಿಷಯವೊಂದನ್ನು ಎಲ್ಲರೂ ನೆನಪಿನಲ್ಲಿಡಬೇಕು. ಏನೆಂದರೆ ಇದನ್ನು ಬಳಸಲು ವೈದ್ಯಕೀಯ ಸಲಹೆ ಕಡ್ಡಾಯ. ಏಕೆಂದರೆ ನೇರಳೆ ಬೀಜದ ಪುಡಿಯು ಮಧು ಮೇಹಕ್ಕೆ ಸಂಪೂರ್ಣ ಔಷಧಿಯಲ್ಲ, ಬದಲಿಗೆ ಇದು ಒಂದು ಪೂರಕ ಚಿಕಿತ್ಸೆ ಮಾತ್ರ.



## ಮನೆಯಲ್ಲೇ ಪುಡಿ ತಯಾರಿಸುವುದು ಹೇಗೆ?:

- **ತಾಜಾ ನೇರಳೆ ಬೀಜಗಳನ್ನು ಚೆನ್ನಾಗಿ ತೊಳೆಯಿರಿ.**
- **3 ರಿಂದ 7 ದಿನಗಳ ಕಾಲ ಬಿಸಿಲಿನಲ್ಲಿ ಸರಿಯಾಗಿ ಒಣಗಿಸಿ.**
- **ಬೀಜದ ಮೇಲಿನ ಸಿಪ್ಪೆ ತೆಗೆದು, ಒಳಗಿನ ಹಸಿರು ಭಾಗವನ್ನು ನುಣ್ಣಗೆ ಬೀಸಿಕೊಳ್ಳಿ (ಪುಡಿ ಮಾಡಿ).**
- **ಈ ಪುಡಿಯನ್ನು ಗಾಳಿಯಾಡದ ಡಬ್ಬದಲ್ಲಿ ಶೇಖರಿಸಿಟ್ಟರೆ ದೀರ್ಘಕಾಲ ಬಳಸಬಹುದು.**

ಈಗಾಗಲೇ ಔಷಧಿ ತೆಗೆದುಕೊಳ್ಳುತ್ತಿರುವವರು ಇದನ್ನು ಬಳಸುವ ಮುನ್ನ ಖಂಡಿತವಾಗಿ ವೈದ್ಯರ ಸಲಹೆ ಪಡೆಯಬೇಕು. ಉತ್ತಮ ಆಹಾರ ಪದ್ಧತಿ, ನಿಯಮಿತ ವ್ಯಾಯಾಮ ಮತ್ತು ವೈದ್ಯರ ಮಾರ್ಗದರ್ಶನದೊಂದಿಗೆ ಇದನ್ನು ಬಳಸಿದಾಗ ಮಾತ್ರ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ.

**– ಕೆ.ಪಿ.ಅಶ್ವಿನ್** ರಾವ್



# ಭಾವ ಲಹರಿ

# ಮಧ್ಯರಾತ್ರಿಯ ಮಕ್ಕಳ ಮಕ್ಕಳ ಮೊಮ್ಮಕ್ಕಳು!

**“ ಜೆನ್ ಝೀ ಶಬ್ದ ಸೂಚಿಸುವುದು ಎರಡು ಸಾವಿರದ ನಂತರದಲ್ಲಿ ಹುಟ್ಟಿ ಬೆಳೆದ ಈಗ ತಾರುಣ್ಯದಲ್ಲಿರುವ ಪೀಳಿಗೆಯನ್ನು. ಅದರ ವಿಶಿಷ್ಟ ಮನೋಭೂಮಿಕೆಯನ್ನು ಗುರುತಿಸಲು ಬಳಸಲಾಗುತ್ತಿರುವ ಶಬ್ದ ಇದು. ಕುತೂಲವೆಂದರೆ ಈ ಪೀಳಿಗೆಯ ಮನಸ್ಸನ್ನು ಹಿಂದಿನದರ ಮುಂದಿನದು ಎಂದು ಸರಳವಾಗಿ ವಿವರಿಸುವಂತಿಲ್ಲ. ಬ್ರಿಟಿಷ್ ಕಾದಂಬರಿಕಾರ್ತಿ ವರ್ಜಿನಿಯ ವೂಲ್ ಇಪ್ಪತ್ತನೆ ಶತಮಾನದ ಮೊದಲ ಪೀಳಿಗೆಯ ಮನಸನ್ನು ಕುರಿತು ಒಂದು ಮಾತು ಹೇಳಿದ್ದರು. ಏನೆಂದರೆ ಪೀಳಿಗೆಯ ಸಂದರ್ಭದಲ್ಲಿ ಮಾನವ ಮನಸ್ಸು ಬದಲಾಗಿ ಹೋಯಿತು ಎಂದು.**

ತ್ತಲೆಮಾರು ಜೆನ್ ಝೀ ಎನ್ನುವ ಶಬ್ದ ಹುಟ್ಟಿಕೊಂಡಿದ್ದು ಅಂತಾರಾಷ್ಟ್ರೀಯ ಸಂದರ್ಭದಲ್ಲಿ. ನೇಪಾಳ, ಶ್ರೀಲಂಕಾ ಹಾಗೂ ಬಾಂಗ್ಲಾದೇಶದಲ್ಲಿ ನಡೆದ ರಾಜಕೀಯ ಕ್ಷಿಪ್ರಕ್ರಾಂತಿಗಳಲ್ಲಿ ಭಾಗವಹಿಸಿದ ಯುವಪೀಳಿಗೆಯ ಮನೋಭೂಮಿಕೆಯಲ್ಲಿರುವ ಕೆಲವು ಸಾಮಾನ್ಯ ಅಂಶಗಳನ್ನು ಗುರುತಿಸಿದ ಜಾಗತಿಕ ಮಾಧ್ಯಮ ಈ ಯುವಜನತೆಯನ್ನು ಜೆನ್ ಝೀ ಎಂಬ ಹೆಸರಿನಿಂದ ಕರೆಯಿತು. ಸಮಕಾಲೀನ ಪೀಳಿಗೆಗಳನ್ನು ಗುರುತಿಸಲಾಗುತ್ತಿದ್ದ ಜೆನ್ ಆಲ್ಫಾ, ಜೆನ್ ಎಕ್ಸ್ ಇವುಗಳಿಗಿಂತಲೂ ಹೆಚ್ಚು ಆಧುನಿಕವಾದ ಶಬ್ದವೊಂದನ್ನು ಹುಟ್ಟಿಸಿತು.

ಕೆಲದಿನ ಹಿಂದೆ ದೆಹಲಿಯಲ್ಲಿ ನಡೆದ ನೀಟ್ ಪ್ರತಿಭಟನೆಯಲ್ಲಿ ಜೆನ್ ಝೀ ಭಾರಿ ಸದ್ದು ಮಾಡಿದೆ. ಹಾಗಾಗಿ ಈ ಶಬ್ದ ಭಾರತದಲ್ಲಿಯೂ ವ್ಯಾಪಕವಾಗಿ ಕೇಳಿ ಬಂದಿದೆ. ಈ ಹಿನ್ನೆಲೆಯಲ್ಲಿ ಜೆನ್ ಝೀಯ ಮನಸ್ಸನ್ನು ಮ್ಯಾಪ್ ಮಾಡಲು ರಾಜಕೀಯ ಪಕ್ಷಗಳು ಮತ್ತು ಬೌದ್ಧಿಕ ಜಗತ್ತು ಹೆಣಗಾಡುತ್ತಿವೆ.





ಜೆನ್ ಝೀ ಶಬ್ದ ಸೂಚಿಸುವುದು ಎರಡು ಸಾವಿರದ ನಂತರದಲ್ಲಿ ಹುಟ್ಟಿ ಬೆಳೆದ ಈಗ ತಾರುಣ್ಯದಲ್ಲಿರುವ ಪೀಳಿಗೆಯನ್ನು. ಅದರ ವಿಶಿಷ್ಟ ಮನೋ ಭೂಮಿಕೆಯನ್ನು ಗುರುತಿಸಲು ಬಳಸಲಾಗುತ್ತಿರುವ ಶಬ್ದ ಇದು. ಕುತೂಲವೆಂದರೆ ಈ ಪೀಳಿಗೆಯ ಮನಸ್ಸನ್ನು ಹಿಂದಿನದರ ಮುಂದಿನದು ಎಂದು ಸರಳವಾಗಿ ವಿವರಿಸುವಂತಿಲ್ಲ. ಬ್ರಿಟಿಷ್ ಕಾದಂಬರಿಕಾರ್ತಿ ವರ್ಜಿನಿಯ ವೂಲ್ ಇಪ್ಪತ್ತನೆ ಶತಮಾನದ ಮೊದಲ ಪೀಳಿಗೆಯ ಮನಸನ್ನು ಕುರಿತು ಒಂದು ಮಾತು ಹೇಳಿದ್ದರು. ಏನೆಂದರೆ ಪೀಳಿಗೆಯ ಸಂದರ್ಭದಲ್ಲಿ ಮಾನವ ಮನಸ್ಸು ಬದಲಾಗಿ ಹೋಯಿತು ಎಂದು.

ಅಂತಹುದೇ ಬದಲಾವಣೆ ಹೊಂದಿದ, ಮುಂದುವರಿಕೆಗಿಂತಲೂ ಬದಲಾವಣೆಯ ಅಂಶವನ್ನೇ ಹೆಚ್ಚಾಗಿ ಹೊಂದಿರುವ ಮನೋಭೂಮಿಕೆ ಜೆನ್ ಝೀಯದು. ಸಂಕೀರ್ಣವಾದ ಮನಸು ಅದು. ಜೆನ್ ಝೀ ಮಾನಸಿಕತೆಯನ್ನು, ವಿಶೇಷವಾಗಿ ಭಾರತದಲ್ಲಿ ಅರ್ಥ ಮಾಡಿಕೊಳ್ಳುವ ಭಾಗವಾಗಿ ಸ್ವಾತಂತ್ರ್ಯ ಸಮಯದಿಂದ ಕೆಲವು ಯುವ ಪೀಳಿಗೆಗಳನ್ನು ಗಮನಿಸುತ್ತ ಬರಬೇಕು. ಮೊದಲನೆಯದು ಸ್ವಾತಂತ್ರ್ಯ ಸಿಗುವ ಸಮಯದಲ್ಲಿ ಯುವಕರಾಗಿದ್ದ ಪೀಳಿಗೆ.

ಅವರನ್ನು (ಸಲ್ಮಾನ್ ರಶ್ದಿಯ ಮಿಡ್ ನೈಟ್ ಚಿಲ್ಡ್ರನ್ ಶಬ್ದ ಬಳಸಿ) ಮಧ್ಯರಾತ್ರಿಯ ಮಕ್ಕಳು ಎಂದು ಕರೆಯಬಹುದು. ಆ ಪೀಳಿಗೆಗೆ ಒಂದು ವಿಶಿಷ್ಟ ಮನೋಭಾವವಿತ್ತು. ಗಾಂಧಿಯನ್ ಮೌಲ್ಯಗಳಿಗೆ ಕಟ್ಟು ಬಿದ್ದ ಪೀಳಿಗೆ ಅದು. ಭಾರತೀಯ ಮೌಲ್ಯಗಳಿಗೆ ಬದ್ಧರಾಗಿ ಬದುಕಿದ್ದವರು. ಆಗ ದೇಶದಲ್ಲಿ ವ್ಯಾಪಕವಾದ ದಟ್ಟವಾದ ಬಡತನವಿತ್ತು. ಸಮಾಜ ಕೃಷಿ ಆಧರಿತವಾಗಿತ್ತು. ಕುಟುಂಬ ಯೋಜನೆ ಇರಲೇ ಇಲ್ಲ. ಪ್ರತಿ ಕುಟುಂಬದಲ್ಲೂ ಹತ್ತು ಹದಿನೈದು ಮಕ್ಕಳಿದ್ದರು. ಶಿಕ್ಷಣದ ಲಭ್ಯತೆ ಕಡಿಮೆ ಇತ್ತು.

ಪರಂಪರಾಗತ ಸಂಸ್ಕೃತಿಯನ್ನು ಪ್ರತಿನಿಧಿಸಿ ಬದುಕಿದ, ಹಿರಿಯರು ಹಾಕಿಕೊಟ್ಟ ಗೆರೆಯನ್ನು ದಾಟದ, ಕೃಷಿ ಸಂಸ್ಕೃತಿ ಮತ್ತು ಒಟ್ಟು ಕುಟುಂಬದ ಸಂಸ್ಕೃತಿ ಹೊಂದಿ ಬದುಕಿದ ಪೀಳಿಗೆ ಅದು. 1970ರ ವೇಳೆಗೆ ಹೊಸ ಯುವಪೀಳಿಗೆ ಬಂತು. ಈ ಪೀಳಿಗೆ ಸ್ವಾತಂತ್ರ್ಯೋತ್ತರ ರಾಜಕೀಯದ, ಮುಖ್ಯವಾಗಿ ಸಮಾಜವಾದಿ ನೀತಿಗಳ ದಟ್ಟವಾದ ಪ್ರಭಾವದಿಂದ ನಿರೂಪಿತವಾಗಿದ್ದು. (ಮಧ್ಯರಾತ್ರಿ ಯ ಮಕ್ಕಳ ಮಕ್ಕಳು). ಈಗಲೂ ಕೃಷಿ ಸಂಸ್ಕೃತಿ ಇತ್ತು. ಒಟ್ಟು ಕುಟುಂಬ ವ್ಯವಸ್ಥೆ ಇತ್ತು. ವ್ಯಾಪಕ ಬಡತನವಿತ್ತು.

ಸರಕಾರಗಳು ಗರೀಬಿ ಹಟಾವೋ ನೀತಿಯನ್ನು ಅನುಸರಿಸಿದವು. ನಿಧಾನವಾಗಿ ಹಿಂದುಳಿದ ವರ್ಗಗಳು ಮತ್ತು ಕಡುಬಡವರು ತುಸು ಚೇತರಿಸಿಕೊಳ್ಳುವಂತಾಯಿತು. ಹಾಗೆಯೇ ಹೆಚ್ಚು ಹೆಚ್ಚಾಗಿ ಎಲ್ಲ ವರ್ಗಗಳು ಮಾನಸಿಕವಾಗಿ ಬೆರೆತು ಒಂದು ದೇಶ (ನೇಶನ್ ಸ್ಟೇಟ್) ಅನ್ನು ಸೃಷ್ಟಿಸಿದವು. ಸಮಾನತೆಯ ಭಾವನೆ ಹುಟ್ಟಿಕೊಂಡಿತು. ಆರ್ಥಿಕವಾಗಿ ತುಸು ಚೈತನ್ಯ ಬಂತು. ಬಾಂಗ್ಲಾ ಯುದ್ಧದ ಗೆಲುವು ದೇಶಕ್ಕೆ ಆತ್ಮವಿಶ್ವಾಸವನ್ನು ತಂದಿತ್ತಿತು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಭಾರಿ ಒತ್ತು ನೀಡಲಾಯಿತು. ಸರಕಾರಿ ನೌಕರಿಗಳು ಬಂದವು. ಬ್ಯಾಂಕ್‌ಗಳು ಸರಕಾರೀಕರಣಗೊಂಡವು. ಪ್ರಾಥಮಿಕ ಶಾಲಾ ಶಿಕ್ಷಕ, ಬ್ಯಾಂಕ್, ಪೊಲೀಸು, ಅಟೆಂಡರ್, ಇತ್ಯಾದಿ ನೌಕರಿಗಳು ದೊಡ್ಡಸಂಖ್ಯೆಯಲ್ಲಿ ಹುಟ್ಟಿಕೊಂಡವು.

ಮನೆಯಲ್ಲಿ ಒಬ್ಬರು ಇಬ್ಬರು ನೌಕರಿ ಮಾಡಿದರು. ಕುಟುಂಬ ಕಲ್ಯಾಣ ಯೋಜನೆ ಬಂತು. ಹತ್ತು ಹದಿನೈದು ಮಕ್ಕಳ ಕುಟುಂಬಗಳು ಕಡಿಮೆಯಾಗಿ ಕುಟುಂಬಗಳಲ್ಲಿ ಮೂರು ನಾಲ್ಕು ಮಕ್ಕಳು ಬಂದರು. ನಂತರದ ಯುವ ಪೀಳಿಗೆ ಎಂಬತ್ತರಿಂದ ತೊಂಬತ್ತರ ದಶಕದಲ್ಲಿ ಯುವಕರಾಗಿದ್ದವರು. ನಮ್ಮ ಪೀಳಿಗೆ. ಮಧ್ಯರಾತ್ರಿಯ ಮೊಮ್ಮಕ್ಕಳ ಮಕ್ಕಳು. ಈಗ ಉನ್ನತ ಶಿಕ್ಷಣ ದೊರೆಯಲು ಆರಂಭವಾಯಿತು.



ಕರ್ನಾಟಕದಲ್ಲಿ ದೇವರಾಜ ಅರಸು ಕಾಲೇಜು ಶಿಕ್ಷಣವನ್ನು ಉಚಿತವಾಗಿಸಿದರು. ರಾಮಕೃಷ್ಣ ಹೆಗಡೆ ಉಚಿತ ಬಸ್ಸು ಸಂಚಾರ ಕಲ್ಪಿಸಿದರು. ಬಂಗಾರಪ್ಪ ಹಳ್ಳಿಗರಿಗೆ ರಿಸರ್ವೇಶನ್ ಜಾರಿಗೆ ತಂದರು. ವೀರಪ್ಪ ಮೊಯ್ಲಿ ಸೀಟ್‌ಗಳನ್ನು ಸಿಇಟಿ ಮೂಲಕ ಹಂಚಿಕೆ ಜಾರಿಗೆ ತಂದರು. ತಾಂತ್ರಿಕ ಶಿಕ್ಷಣಕ್ಕೆ ಭಾರಿ ಒತ್ತು ಬಂತು. ಇಂತಹ ಪ್ರಕ್ರಿಯೆ ದೇಶಾದ್ಯಂತ ನಡೆಯಿತು. ಪೀಳಿಗೆ ಕೆಲವು ಲಿಬರಲ್ ಆದ ನಂಬಿಕೆಗಳೊಂದಿಗೆ ಬೆಳೆಯಿತು. ಹೆಚ್ಚು ಕಡಿಮೆ ಈಗ ಧರ್ಮ, ಜಾತಿ ಇತ್ಯಾದಿ ಭಾವನೆಗಳು ಹಿಂದೆ ಸರಿದವು. ಜಾತ್ಯತೀತವಾಗಿ ಜನ ಹೋಟೆಲ್‌ಗಳಲ್ಲಿ ತಿನ್ನಲು ಆರಂಭಿಸಿದರು. ಟಿವಿ ಬಂತು. ಜನ ಹೊರಗಡೆ ಅಡ್ಡಾಡಲಾರಂಭಿಸಿದರು. ಬೆಂಗಳೂರು ಮುಂಬೈ ನಗರಗಳಲ್ಲಿ ನೌಕರಿ ಮಾಡಿದರು.

ಹೆಚ್ಚು ಕಡಿಮೆ ಎಲ್ಲರೂ ಊರುಗಳನ್ನು ಬಿಟ್ಟು ನಗರಗಳನ್ನು ಸೇರಿಕೊಂಡರು. ಕೃಷಿ ಸಂಸ್ಕೃತಿ ಮರವೆಯಾಗಿ ಹೋಯಿತು. ನಗರ ಸಂಸ್ಕೃತಿ ಬಂತು. ಬಂದ ನಗರ ಸಂಸ್ಕೃತಿ ಜನರಿಗೆ ಖಾಸಗಿತನ ಒದಗಿಸಿತು. ಜನ ಈಗ ಸಿನಿಮಾ ನೋಡಿದರು. ಬಿಯರ್ ಕುಡಿದರು. ನಾನ್ ವೆಜ್ ತಿನ್ನಲು, ಗುಟ್ಟಾಗಿ ಬ್ಲೂ ಫಿಲಂಗಳನ್ನು ನೋಡಲು ಕಲಿತರು. ನಮ್ಮ ಪೀಳಿಗೆಯ ಕೊನೆಯ ಹಂತದವರಿಗೆ ಅಂದರೆ 90ರ ಸುಮಾರಿಗೆ ಶಿಕ್ಷಣ ಪಡೆದ ಪೀಳಿಗೆಗಿಂತ ದೊಡ್ಡ ದೊಡ್ಡ ನೌಕರಿಗಳು ಸಿಕ್ಕವು. ಐಟಿ ಯುಗ ಬಂತು. ಖರ್ಚು ಮಾಡಲಾಗದಷ್ಟು ಸಂಬಳ ಬಂತು. ಜನ ವಿದೇಶಗಳಿಗೆ ಹೋದರು. ಬಹಳ ಖರ್ಚು ಮಾಡಿದರು. ಇವರನ್ನು ನೋಡಿದ ಹೆಚ್ಚು ಕಡಿಮೆ ಎಲ್ಲರೂ ತಮ್ಮ ಊರು, ಕೃಷಿ ಸಂಸ್ಕೃತಿ, ಹಳ್ಳಿ ಸಂಸ್ಕೃತಿ, ಭಾರತೀಯ ಸಂಸ್ಕೃತಿ ಬಿಟ್ಟರು.

ತಮ್ಮ ಸಂಸ್ಕೃತಿಗಳನ್ನು ಹೆಚ್ಚುಕಡಿಮೆ ಬರೇ ನೆನಪಾಗಿಸಿಕೊಂಡರು. ಈ ಸಂದರ್ಭದಲ್ಲಿ ಅಂದರೆ 90ರ ದಶಕದಲ್ಲಿಯೇ ಭಾರತದಲ್ಲಿ ಮುಕ್ತ ಆರ್ಥಿಕತೆ ಆರಂಭವಾಗಿದ್ದು. ಮುಕ್ತ ಆರ್ಥಿಕತೆಯ ಲಾಭ ದೊರೆತಿದ್ದು ಈ ಪೀಳಿಗೆಗೆ. ಇನ್ನೂ ಒಂದು ಅಂಶವನ್ನು ಗಮನಿಸಬೇಕು. ತೊಂಬತ್ತರ ದಶಕ ಹೆಚ್ಚು ಕಡಿಮೆ ಐಡಿಯಾಲಜಿಗಳಿಂದ ಅಂದರೆ ಕೆಪಿಟಲಿಸ್ಟ್ ಮತ್ತು ಸಮಾಜವಾದಿ ಎರಡೂ ಐಡಿಯಾಲಜಿಗಳಿಂದ ಬಿಡುಗಡೆಯಾದ ಜಗತ್ತು.

ರಷ್ಯಾದ ಪತನದ ನಂತರ ಸಮಾಜವಾದಿ ತತ್ವಜ್ಞಾನ ಜನರನ್ನು ಆಕರ್ಷಿಸುವ ತತ್ವಜ್ಞಾನವಾಗಿ ಉಳಿಯಲಿಲ್ಲ. ಹಾಗೆ ಕ್ಯಾಪಿಟಲಿಸ್ಟ್ ಅಂದರೆ ಬಂಡವಾಳಶಾಹಿ ತತ್ವಜ್ಞಾನದ ಬಿರುಕುಗಳು ಕೂಡ ಈಗ ಎದ್ದು ಕಂಡವು. ಈ ಕನ್ಸ್ಯೂಮರ್ ಯುಗದಲ್ಲಿ ಗಾಂಧಿ ಅಪ್ರಸ್ತುತವೆನಿಸಿದರು. ಎಲ್ಲ ತತ್ವಜ್ಞಾನಗಳನ್ನು ಮೀರಿದ ಉದ್ಯಮಗಳು ಅಂದರೆ ಸಾಫ್ಟ್‌ವೇರ್ ಉದ್ಯಮಗಳು ಬಂದವು. ಜ್ಞಾನ ಆಧರಿತ ಜಗತ್ತು ಹುಟ್ಟಿ ಕೊಂಡಿತು. ಹಾಗೆಯೇ ಅಮೇರಿಕನ್ ಮಾದರಿಯ ಮಹಿಳಾ ಹಕ್ಕಿನ, ಸ್ವಾತಂತ್ರ್ಯದ ಕಲ್ಪನೆ ಬಂತು. ಹೆಣ್ಣು ಗಂಡು ನಡುವೆ ವ್ಯತ್ಯಾಸ ಇಲ್ಲ ಎಂಬ ಯೋಚನೆ ಬಂತು.

ಗಂಡ ಹೆಂಡತಿ ಸೇರಿಯೇ ಪಾರ್ಟಿ ಮಾಡಿದರು. ಕುಟುಂಬಕ್ಕೆ ಒಂದೇ ಮಗು ಎಂಬ ಪದ್ಧತಿ ಜಾರಿಗೆ ಬರಲಾರಂಭಿಸಿತು. ಮಕ್ಕಳನ್ನು ವಿಪರೀತ ಮುದ್ದು ಮಾಡಿ ಮುಕ್ತ ವಾತಾವರಣದಲ್ಲಿ ಬೆಳೆಸಿದರು. ಒಟ್ಟಾರೆಯಾಗಿ ಇತಿಹಾಸದ, ಸಂಪ್ರದಾಯಗಳ, ಜಾತಿ ಮತಗಳ, ಐಡಿಯಾಲಜಿಯ, ಹಣಕಾಸಿನ, ಹೆಣ್ಣು ಗಂಡು ಎನ್ನುವ ಯಾವುದೇ ಸಂಕೋಲೆಗಳಿಲ್ಲದ ಜಗತ್ತು ಅಂದರೆ ಎರಡು ಸಾವಿರದ ಇಸವಿಯ ಸುತ್ತಮುತ್ತ ಹುಟ್ಟಿಕೊಂಡಿತು.

ಇವತ್ತಿನ ಜೆನ್ ಝೀ ಇಂತಹ ಪೀಳಿಗೆಗೆ ಸೇರಿದವರು. ಮಧ್ಯರಾತ್ರಿಯ ಮಕ್ಕಳ ಮಕ್ಕಳ ಮೊಮ್ಮಕ್ಕಳು. ಈಗ ಸುಮಾರು ಐವತ್ತರ ಹರಯದ ಸುತ್ತಮುತ್ತ ಇರುವವರ ಮಕ್ಕಳು. ವಿಶೇಷತೆಯೆಂದರೆ ಇವರಲ್ಲಿ ಹೆಚ್ಚಿನವರಿಗೆ ಗಟ್ಟಿಯಾದ ಆರ್ಥಿಕ ಹಿನ್ನೆಲೆ ಇದೆ. ಮನೆಯಲ್ಲಿ ಹೆಚ್ಚು ಕಡಿಮೆ ಒಂದೇ ಮಗ ಅಥವಾ ಮಗಳು. ಹೆಚ್ಚು ಕಡಿಮೆ ಕೈ ಕಾಲಿಗೆ ಮಣ್ಣು ತಾಗಿಸದೆ ಬೆಳೆದವರು. ವಿಪರೀತ ಮುದ್ದಿನಲ್ಲಿ ಬೆಳೆದವರು. ಬಡತನವನ್ನು ಅನುಭವಿಸದೆ ಇರುವವರು. ನಾಚಿಕೆ ಮುಳ್ಳು ಚುಚ್ಚಿಸಿಕೊಂಡ ನೋವು ಕೂಡ ಅನುಭವಿಸದವರು. ಜಗತ್ತಿನ ಎಲ್ಲವೂ ಕೇವಲ ಒಂದು ಬಟನ್ ಕ್ಲಿಕ್‌ನಲ್ಲಿ ಇವರಿಗೆ ಸಿಕ್ಕಿತು.

ಇವರು ಹುಟ್ಟುವಾಗಲೇ ಮನೆ ಆಧುನಿಕ ಗೆಜೆಟ್‌ಗಳಿಂದ ಸಮೃದ್ಧವಾಗಿತ್ತು. ಬ್ರಾಡ್ ಬ್ಯಾಂಡ್ ಇಂಟರ್ನೆಟ್, ಲ್ಯಾಪ್ ಟಾಪ್ ಹಾಗೂ ಸ್ಮಾರ್ಟ್ ಮೊಬೈಲ್‌ಗಳನ್ನು ಕೈಯಲ್ಲಿ ಹಿಡಿದೇ ಹುಟ್ಟಿದರು. ಇಂಟರ್ನೆಟ್ ಎಂತಹ ಜಗತ್ತು ಎಂದರೆ ಅದಕ್ಕೆ ಜಾತಿ ಮತಗಳ, ಬೇಕಾದ್ದು ಬೇಡವಾದ್ದು, ರಾಷ್ಟ್ರೀಯತೆ, ಅಂತಾರಾಷ್ಟ್ರೀಯತೆ, ಖಾಸಗಿತನ, ಗಂಡು ಹೆಣ್ಣು, ತೃತೀಯ ಲಿಂಗ, ಅಂತರಂಗ ಬಹಿರಂಗ ಇತ್ಯಾದಿ ಬೇಲಿಗಳಿಲ್ಲ. ಇಂಟರ್ ನೆಟ್‌ನ ತೀವ್ರ ಪ್ರಭಾವದಲ್ಲಿ ಬಂದಿರುವ ಜೆನ್ ಝೀ ಮನಸ್ಥಿತಿ ಸಹಜವಾಗಿಯೇ ಅವೆಲ್ಲವುಗಳ ಬಂಧದಿಂದ ಮುಕ್ತವಾದದ್ದು. ಗೂಗಲ್‌ನ ಜಗತ್ತು ಇವರಿಗೆ ವಾಸ್ತವ.

ಗೂಗಲ್ಲೇ ಅಂತಿಮ ಸತ್ಯ ಮತ್ತು ಉಳಿದ ಜಗತ್ತೆಲ್ಲವೂ ಮಿಥ್ಯ. ಹಾಗೆಯೇ ಒಟ್ಟು ಕುಟುಂಬಗಳು ಹರಿದು ಹೋಗಿದ್ದರಿಂದ ಸಂಬಂಧಗಳಿಂದ ಮುಕ್ತವಾದ ಜಗತ್ತು ಇದು. ಜೆನ್ ಝೀ ಹೆಚ್ಚಾಗಿ ಕಾಲಕಳೆಯುವುದು ಸಂಬಂಧಿಗಳೊಂದಿಗೆ, ಸಂಗಾತಿಗಳೊಂದಿಗೆ ಅಲ್ಲ. ಅವರು ಏಕಾಂಗಿಗಳು ಮತ್ತು ಅಂತರ್ಮುಖಿಗಳು. ಹೊರಜಗತ್ತಿನಿಂದ ಮತ್ತು ಜನರಿಂದ ದೂರ ಉಳಿಯಬಯಸುವವರು. ಇಂಟರ್‌ನೆಟ್ ಮತ್ತು ಮೊಬೈಲ್‌ಗಳು ಅವರ ಆತ್ಮೀಯ ಸಂಗಾತಿಗಳು. ಅಂತರ್ಜಾಲ ಇಲ್ಲದಿದ್ದರೆ ಅವರ ಜೀವಜಲವೇ ಬತ್ತಿಹೋಗುತ್ತದೆ. ಚಾಟ್ ಮಾಡುವ ಅವರು ಮಾತನಾಡುವುದು ಕಡಿಮೆ. ಏಕಾಂಗಿತನ, ಮಾನವ ಸಂವಹನದ ಕೊರತೆ, ಈ ಪೀಳಿಗೆಯನ್ನು ಕಾಡುತ್ತಿವೆ ಅನಿಸುತ್ತದೆ. ಈ ಕಾರಣದಿಂದಲೇ ಹೆಚ್ಚಾಗಿ ಜೆನ್ ಝೀ ತುಂಬ ಸೂಕ್ಷ್ಮ ಮನಸ್ಸಿನದು. ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ತಂದೆ ತಾಯಿಯನ್ನು ಬೆದರಿಸುವುದು ಇತ್ತೀಚಿನ ದಿನಗಳ ಸಾಮಾನ್ಯ ವಿಷಯ.

ಚಿಕ್ಕ ಚಿಕ್ಕ ಕಾರಣಗಳಿಗೂ ಡಿಪ್ರೆಶನ್ ಮತ್ತು ಆತ್ಮಹತ್ಯೆಯತ್ತ ಜೆನ್ ಝೀ ಮನಸ್ಸು ಓಡುತ್ತಿರುವ ವರದಿಗಳಿವೆ. ಸಂಪ್ರದಾಯಗಳು, ಧರ್ಮ, ಜಾತಿ ಇತ್ಯಾದಿ ಎಲ್ಲವೂ ಕಡಿದುಹೋಗಿದ್ದರಿಂದ ಇತಿಹಾಸ ಮತ್ತು ಸಂಪ್ರದಾಯ, ಸಂಸ್ಕೃತಿ ಮುಕ್ತ ಜಗತ್ತು ಇದು. ಚರಿತ್ರೆಯ ಬಡತನ ಅವರಿಗೆ ಕೇವಲ ಹಾಸ್ಯದ ವಿಷಯ ಅಷ್ಟೇ. ಮಾತ್ರ ಭಾಷೆ, ಒಳಭಾಷೆಗಳು, ದೇಶದ ಸಾಹಿತ್ಯ, ಪರಂಪರೆ ಈ ಮಕ್ಕಳ ಜಗತ್ತಿಗೆ ಅರ್ಥವಾಗುವುದಿಲ್ಲ. ಹಾಗೆಂದು ಜೆನ್ ಜೀಯ ಸಕಾರಾತ್ಮಕ ಗುಣಗಳನ್ನು ನಾವು ಗಮನಿಸಬೇಕು. ಅದಕ್ಕೆ ತನ್ನದೇ ಆದ ಮೌಲ್ಯಗಳ ವ್ಯವಸ್ಥೆ ಇದೆ.

ಸುಮಾರಾಗಿ ಎದ್ದು ಕಾಣುವ ಜೆನ್ ಝೀ ಗುಣವೆಂದರೆ ಅದು ಹಿಪಾಕ್ರಟಿಕ್ ಆದ ಪೀಳಿಗೆ ಅಲ್ಲ. ತನಗೆ ಅನಿಸಿದ್ದನ್ನು ಅದು ನೇರವಾಗಿ ಹೇಳಿಬಿಡುತ್ತದೆ ಮತ್ತು ಮಾಡಿಬಿಡುತ್ತದೆ. ಹಾಗೆಯೇ ನೇರವಾಗಿ, ದಿಟ್ಟವಾಗಿ, ಪ್ರಾಮಾಣಿಕವಾಗಿ ಬದುಕಲು ಇಚ್ಛಿಸುತ್ತದೆ. ಮುಖ್ಯವಾಗಿ ತುಂಬ ಬುದ್ಧಿವಂತ ಪೀಳಿಗೆ. ಸಮಸ್ಯೆಗಳಿಗೆ ಹೊಸ ಪರಿಹಾರಗಳನ್ನು ಕಂಡುಹಿಡಿಯುವದರಲ್ಲಿ ಸಿದ್ಧಹಸ್ತರು ಅವರು. ಭ್ರಷ್ಟತೆಯನ್ನು ಸಹಿಸದ ಜನಾಂಗ ಇದು. ಹಾಗಾಗಿಯೇ ಇಂದಿನ ಮಕ್ಕಳು ಸರಕಾರಿ ನೌಕರಿಗಳಿಗೆ ಹೋಗಲು ಅಷ್ಟೊಂದು ಬಯಸದೆ ಇರುವುದು. ಭ್ರಷ್ಟಾಚಾರ ವಿರುದ್ಧ ಹೋರಾಟಗಳಲ್ಲಿ ಅದು ತುಂಬ ಶ್ರದ್ಧೆಯಿಂದ ಭಾಗವಹಿಸುತ್ತದೆ. ಜಾತಿ, ಮತಗಳ ಬಂಧವೂ ಅದಕ್ಕಿಲ್ಲ.

ಸಣ್ಣ, ಕುತ್ಸಿತ ಮನಸ್ಸಿನ ಪೀಳಿಗೆಯಲ್ಲ ಇದು.



## ಗೂಗಲ್ಲೇ ಅಂತಿಮ ಸತ್ಯ ಮತ್ತು ಉಳಿದ ಜಗತ್ತೆಲ್ಲವೂ ಮಿಥ್ಯ.....

- **ಕುಟುಂಬಗಳು ಹರಿದು ಹೋಗಿದ್ದರಿಂದ ಸಂಬಂಧಗಳಿಂದ ಮುಕ್ತವಾದ ಜಗತ್ತು ಇದು.**
- **ಜೆನ್ ಝೀ ಹೆಚ್ಚಾಗಿ ಕಾಲಕಳೆಯುವುದು ಸಂಬಂಧಿಗಳೊಂದಿಗೆ, ಸಂಗಾತಿಗಳೊಂದಿಗೆ ಅಲ್ಲ. ಅವರು ಏಕಾಂಗಿಗಳು ಮತ್ತು ಅಂತರ್ಮುಖಿಗಳು.**
- **ಹೊರಜಗತ್ತಿನಿಂದ ಮತ್ತು ಜನರಿಂದ ದೂರ ಉಳಿಯಬಯಸುವವರು.**
- **ಇಂಟರ್‌ನೆಟ್ ಮತ್ತು ಮೊಬೈಲ್‌ಗಳು ಅವರ ಆತ್ಮೀಯ ಸಂಗಾತಿಗಳು.**
- **ಅಂತರ್ಜಾಲ ಇಲ್ಲದಿದ್ದರೆ ಅವರ ಜೀವಜಲವೇ ಬತ್ತಿಹೋಗುತ್ತದೆ.**
- **ಚಾಟ್ ಮಾಡುವ ಅವರು ಮಾತನಾಡುವುದು ಕಡಿಮೆ.**
- **ಏಕಾಂಗಿತನ, ಮಾನವ ಸಂವಹನದ ಕೊರತೆ, ಈ ಪೀಳಿಗೆಯನ್ನು ಕಾಡುತ್ತಿವೆ ಅನಿಸುತ್ತದೆ.**
- **ಈ ಕಾರಣದಿಂದಲೇ ಹೆಚ್ಚಾಗಿ ಜೆನ್ ಝೀ ತುಂಬ ಸೂಕ್ಷ್ಮ ಮನಸ್ಸಿನದು.**
- **ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ತಂದೆ ತಾಯಿಯನ್ನು ಬೆದರಿಸುವುದು ಇತ್ತೀಚಿನ ದಿನಗಳ ಸಾಮಾನ್ಯ ವಿಷಯ.**
- **ಚಿಕ್ಕ ಚಿಕ್ಕ ಕಾರಣಗಳಿಗೂ ಡಿಪ್ರೆಶನ್ ಮತ್ತು ಆತ್ಮಹತ್ಯೆಯತ್ತ ಜೆನ್ ಝೀ ಮನಸ್ಸು ಓಡುತ್ತಿರುವ ವರದಿಗಳಿವೆ.**
- **ಸಂಪ್ರದಾಯಗಳು, ಧರ್ಮ, ಜಾತಿ ಇತ್ಯಾದಿ ಎಲ್ಲವೂ ಕಡಿದುಹೋಗಿದ್ದರಿಂದ ಇತಿಹಾಸ ಮತ್ತು ಸಂಪ್ರದಾಯ, ಸಂಸ್ಕೃತಿ ಮುಕ್ತ ಜಗತ್ತು ಇದು.**
- **ಚರಿತ್ರೆಯ ಬಡತನ ಅವರಿಗೆ ಕೇವಲ ಹಾಸ್ಯದ ವಿಷಯ ಅಷ್ಟೇ.**
- **ಮಾತ್ರ ಭಾಷೆ, ಒಳಭಾಷೆಗಳು, ದೇಶದ ಸಾಹಿತ್ಯ, ಪರಂಪರೆ ಈ ಮಕ್ಕಳ ಜಗತ್ತಿಗೆ ಅರ್ಥವಾಗುವುದಿಲ್ಲ.**

ಹಾಗೆಯೇ ಬಹಳ ಆಶೋತ್ತರಗಳನ್ನಿಟ್ಟುಕೊಂಡ ಜನಾಂಗ ಇದು. ಅದಕ್ಕೆ ಜಾಗತಿಕ ಮಟ್ಟದ ಜೀವನಶೈಲಿಯಲ್ಲಿ ಬದುಕುವ ಆಸೆ ಇದೆ. ಪರಿಸರದ ಕುರಿತು, ಸ್ವಚ್ಛತೆಯ ಕುರಿತು, ಆರ್ಥಿಕ ಅಭಿವೃದ್ಧಿಯ ಕುರಿತು ತುಂಬ ಭಾವನಾತ್ಮಕವಾಗಿರುವ ಪೀಳಿಗೆ ಇದು. ಸಾಧಾರಣವಾಗಿ ಸೆಕ್ಯುಲರ್ ಆಗಿರುವ ಜೆನ್ ಝೀ ಭಾರತದಲ್ಲಿ ಸ್ಥೂಲವಾಗಿ ಮೋದಿ, ಯೋಗಿ ರಾಜಕೀಯವನ್ನು ಬೆಂಬಲಿಸುತ್ತದೆ.

ಹಿಂದುತ್ವ ವಿಚಾರಧಾರೆಯ ಪ್ರಭಾವದಲ್ಲಿ ಬಂದಿದೆ. ಮಿಲಿಟರಿ ದೃಷ್ಟಿಯಿಂದ ಬಲವಾದ ಭಾರತವನ್ನು ಕಟ್ಟುವ ಯೋಚನೆಗಳಿಗೆ ಅದರ ಸಹಮತವಿದೆ. ಮೋದಿ ಆರ್ಥಿಕ ನೀತಿಗಳಿಗೂ ಅದರ ಬೆಂಬಲವಿದೆ. ಅದು ಬಯಸುವುದು ಬಲವಾದ, ಸಮೃದ್ಧವಾದ, ಸ್ವಚ್ಛವಾದ, ಗುಣಮಟ್ಟದ ಜೀವನವನ್ನು ನೀಡುವ ರಾಜಕೀಯವನ್ನು. ದೇಶದ ವ್ಯಾಪಕ ಭ್ರಷ್ಟತೆ, ಹಳೆಯ ಕಾನೂನುಗಳು, ಸಾವಕಾಶವಾಗಿ ನಡೆಯುವ ನ್ಯಾಯ ವ್ಯವಸ್ಥೆ, ರಿಸರ್ವೇಶನ್, ಮೈನಾರಿಟಿ ಓಲೈಕೆಯ ಹಳೆಯ ರಾಜಕೀಯ ಶೈಲಿಯ, ಸರಕಾರಿ ವ್ಯವಸ್ಥೆಯ ಕುರಿತು ಜೆನ್ ಝೀಗೆ ತೀವ್ರ ರೇಜಿಗೆ ಇದೆ.

ಈಗ ಜೆನ್ ಝೀ ಬಯಸುತ್ತಿರುವುದು ಮುಖ್ಯವಾಗಿ ಶಿಕ್ಷಣ, ನ್ಯಾಯಾಂಗ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಭಾರಿ ಸುಧಾರಣೆಗಳನ್ನು. ಜೆನ್ ಝೀಯನ್ನು ಯಾರೂ ಹಗುರವಾಗಿ ತೆಗೆದುಕೊಳ್ಳುವಂತೆ ಇಲ್ಲ. ತೀವ್ರವಾಗಿ, ಉದ್ರೇಕಿತವಾಗಿ ಯೋಚಿಸುವ, ಕ್ರಿಯೆಯಲ್ಲಿ ತೊಡಗುವ ಜನಾಂಗ ಇದು. ಮಾತು ಮತ್ತು ಕೃತಿಗಳಲ್ಲಿ ವಿಪರೀತಕ್ಕೆ ಕೂಡ ಹೋಗಿ ಬಿಡಬಲ್ಲವರು ಅವರು. ಈಗಿರುವ ಸರಕಾರಗಳು ಹಿಂದಿನದೇ ದಾರಿ ತುಳಿದರೆ ಜೆನ್ ಝೀ ಸುಮ್ಮನಿರಲಿಕ್ಕಿಲ್ಲ. ಅದಕ್ಕೆ ಕಾಯುತ್ತ ಕೂರುವ ಸಹನೆಯಿಲ್ಲ.

ಸಂಪೂರ್ಣವಾಗಿ ಹೊಸ ಪಕ್ಷವೊಂದಕ್ಕೆ ಅದು ಅಧಿಕಾರ ನೀಡಿಬಿಡಬಹುದು. ಏಕೆಂದರೆ ಅದು ಹೆಚ್ಚು ಕಡಿಮೆ ಒಂದೇ ಕಡೆ ಮತ ನೀಡುತ್ತದೆ. ಮತ್ತು ಚುನಾವಣೆಗಳನ್ನು ದೊಡ್ಡಪ್ರಮಾಣದಲ್ಲಿ ಪ್ರಭಾವಿಸುವ ಶಕ್ತಿ ಅದಕ್ಕಿದೆ. ತಮಿಳುನಾಡಿನಲ್ಲಿ ಟಿವಿಕೆಯನ್ನು ಗೆಲ್ಲಿಸಿದ ಹಾಗೆ. ಜೆನ್ ಝೀಯನ್ನು ತನ್ನ ಜೊತೆ ಕೊಂಡೊಯ್ಯಲು ಮೋದಿ ಸರಕಾರ ಕೆಲವು ಭಾರೀ ನಿರ್ಣಯಗಳನ್ನು ತೆಗೆದುಕೊಳ್ಳ ಬೇಕಾಗಿ ಬರಬಹುದು. ಇಲ್ಲವಾದರೆ ಬಿಜೆಪಿ ದುರ್ಬಲಗೊಂಡು ಆಪ್ ನಂತಹ ಪ್ರಾದೇಶಿಕ ಪಕ್ಷಗಳು ಹುಟ್ಟಿಕೊಳ್ಳಲಿವೆ.

**– ಪ್ರೊ.ಆರ್.ಜಿ.**ಹೆಗಡೆ




# ಶಾಂತಿ ಹೈಟ್ಸ್ ಮತ್ತು ಮಹಾಭಾರತ ಪ್ರಶಸ್ತಿಗಳು

ಶಾಂತಿ ಹೈಟ್ಸ್‌ನಲ್ಲಿ ಮುಂಗಾರು ಮಳೆ ಪ್ರಾರಂಭವಾಗಿತ್ತು. ಆದರೆ ಶರ್ಮಾ ಮನೆತನದ ಅವಳಿ ಜವಳಿ ಮಕ್ಕಳು ಕಾರಿಡಾರ್‌ನಲ್ಲಿಯೇ ಸ್ಕೇಟ್ ಬೋರ್ಡ್ ಓಡಿಸುವುದನ್ನು ಕಲಿತಂದಿನಿಂದ, ಆ ವಸತಿ ಸಮುಚ್ಚಯದಲ್ಲಿ ಶಾಂತಿ ಎಂಬುದು ಕೇವಲ ಹೆಸರಿಗೆ ಮಾತ್ರ ಉಳಿದಿತ್ತು.

ವೆಂಕಟ್ ಒಬ್ಬ ನಿವೃತ್ತ ಅಕೌಂಟೆಂಟ್. ಅವರ ಜೀವನದ ಒಂದೇ ಒಂದು ಸಣ್ಣ ಆಸೆ ಎಂದರೆ ಮಧ್ಯಾಹ್ನ ಪ್ರಶಾಂತವಾಗಿ ಒಂದು ನಿದ್ದೆ ಮಾಡುವುದು. ಆದರೆ ದಿನನಿತ್ಯದ ಈ ಗಲಾಟೆಯಿಂದ ಅವರ ತಾಳ್ಮೆ ಎಲ್ಲೆ ಮೀರಿತ್ತು. ತುರ್ತು ಸಭೆಗಳನ್ನು ಕರೆದು ಸೋತಿದ್ದರು, ವಾಟ್ಸಾಪ್ ಸಮೂಹದಲ್ಲಿ ಹಾಕಿದ ವಿನಂತಿಗಳಿಗೆ ಅಯ್ಯೋ ಅಂಕಲ್, ಮಕ್ಕಳು ಅಂದ ಮೇಲೆ ಆಟವಾಡದೆ ಇನ್ನೇನು ಮಾಡ್ತಾರೆ? ಎಂಬ ಉಡಾಫೆಯ ಉತ್ತರಗಳೇ ಸಿಕ್ಕಿದ್ದವು.

ಕೊನೆಗೆ ವೆಂಕಟ್ ನಿರ್ಧರಿಸಿದರು ಸರಿ, ಶಿಸ್ತು ತರಲು ಸಾಧ್ಯವಿಲ್ಲವೆಂದರೆ, ಈ ಅಶಿಸ್ತನ್ನೇ ಸನ್ಮಾನಿಸೋಣ!

ಒಂದು ರವಿವಾರದ ಬೆಳಿಗ್ಗೆ, ಮುಖ್ಯ ಅಂಗಳದ ಸೂಚನಾ ಫಲಕದಲ್ಲಿ ಬಂಗಾರದ ಬಣ್ಣದ ದೊಡ್ಡ ಪೋಸ್ಟರ್ ಪ್ರತ್ಯಕ್ಷವಾಯಿತು. ಅದರ ಕೆಳಗಿನ ಮೇಜಿನ ಮೇಲೆ ಕೆಂಪು ಬಟ್ಟೆ ಹೊದಿಸಿ, ನಾಲ್ಕು ಮಣ್ಣಿನ ಪ್ರಶಸ್ತಿ ಫಲಕಗಳನ್ನು ಇಡಲಾಗಿತ್ತು.

ವೆಂಕಟ್ ಧ್ವನಿವರ್ಧಕದ ಮುಂದೆ ನಿಂತು, ತಮ್ಮ ಕನ್ನಡಕವನ್ನು ಸರಿಪಡಿಸಿಕೊಳ್ಳುತ್ತಾ ಮಾತನಾಡಲು ಶುರು ಮಾಡಿದರು. ಸುಮಾರು ಮೂವತ್ತು ಜನ ನಿವಾಸಿಗಳು ಕೈಯಲ್ಲಿ ಚಹಾ ಕಪ್ ಹಿಡಿದು ಕುತೂಹಲದಿಂದ ನೆರೆದಿದ್ದರು.

ಎಲ್ಲಾ ನೆರೆಹೊರೆಯವರಿಗೂ ಸುಪ್ರಭಾತ, ವೆಂಕಟ್ ಧ್ವನಿ ಅಂಗಳದಲ್ಲಿ ಗಂಭೀರವಾಗಿ ಮೊಳಗಿತು. ನಮ್ಮ ಶಾಂತಿ ಹೈಟ್ಸ್ ಅನ್ನು ಈ ಮಟ್ಟದ ಕಲಾತ್ಮಕ ಗೊಂದಲದ ಗೂಡಾಗಿ ಮಾಡಿದ ಮಹಾನುಭಾವರನ್ನು ಗುರುತಿಸಲು ಇಂದು ನಾವು ಇಲ್ಲಿದ್ದೇವೆ. ಎಲ್ಲರಿಗೂ ಮೊದಲನೇ ವಾರ್ಷಿಕ ಮಹಾಭಾರತ ಶ್ರೇಷ್ಠತಾ ಪ್ರಶಸ್ತಿಗಳಿಗೆ ಸುಸ್ವಾಗತ!

ಜನರ ಮಧ್ಯೆ ಒಂದು ಕ್ಷಣ ಸಣ್ಣ ಆಘಾತದ ಮೌನ ಆವರಿಸಿತು.

**ಅತ್ಯುತ್ತಮ ಪಿತೃ ಕಣ್ಣುಮುಚ್ಚಾಲೆಗೆ: ಧೃತರಾಷ್ಟ್ರ ಪ್ರಶಸ್ತಿ**

ನಮ್ಮ ಮೊದಲ ವಿಭಾಗ, ವೆಂಕಟ್ ಬೂದು ಬಣ್ಣ ಬಳಿದಿದ್ದ ಪ್ರಶಸ್ತಿಯನ್ನು ಎತ್ತಿ ತೋರಿಸಿದರು. ಈ ಪ್ರಶಸ್ತಿ ಆ ತಂದೆಗೆ ಸಲ್ಲುತ್ತದೆ, ಯಾರಿಗೆ ಕಣ್ಣುಗಳು ಚೆನ್ನಾಗಿ ಕಾಣಿಸುತ್ತಿದ್ದರೂ, ತಮ್ಮ ಮುದ್ದಿನ ಸಂತಾನ ಆಸ್ತಿಯನ್ನು ಧ್ವಂಸ ಮಾಡುವಾಗ ಸಂಪೂರ್ಣ ಅಂಧರಾಗುವ ಅದ್ಭುತ ಶಕ್ತಿ ಇದೆಯೋ ಅವರಿಗೆ!

ಅವರು ಸಣ್ಣ ವಿರಾಮ ತೆಗೆದುಕೊಂಡು, ಈ ಧೃತರಾಷ್ಟ್ರ ಪ್ರಶಸ್ತಿಯು 402ರ ಶ್ರೀಮಾನ್ ಶರ್ಮಾ ಅವರಿಗೆ ಸಲ್ಲುತ್ತದೆ! ತಮ್ಮ ಒಂಬತ್ತು ವರ್ಷದ ಮಗ ಹೊಸದಾಗಿ ಹಾಕಿಸಿದ ಎಲಿವೇಟರ್‌ನ ಮರದ ಗೋಡೆಯ ಮೇಲೆ ಕೀಲಿ ಕೈಯಿಂದ ಹೆಸರು ಕೊರೆಯುತ್ತಿದ್ದಾಗ, ಇವರು ಆರಾಮಾಗಿ ಬೆಂಚ್ ಮೇಲೆ ಕುಳಿತು ಮೊಬೈಲ್ ನೋಡುತ್ತಿದ್ದರು!

ಶರ್ಮಾ ತಮ್ಮ ಚಹಾ ಕುಡಿಯುವುದನ್ನು ಅರ್ಧಕ್ಕೆ ನಿಲ್ಲಿಸಿ, ಹೇ ವೆಂಕಟ್ ಅವರೇ! ಅವನು ಬರಿ ತನ್ನ ಸೃಜನಶೀಲತೆ ತೋರಿಸುತ್ತಿದ್ದ ಅಷ್ಟೇ! ಎಂದರು.

ಮತ್ತು ನೀವು ನಿಮಗಿದ್ದ ದೃಷ್ಟಿಯನ್ನೇ ಬಲಿ ಕೊಟ್ಟರಿ, ಅಕೌಂಟೆಂಟ್ ವೆಂಕಟ್ ಮುಗುಳುನಕ್ಕರು. ತಗೊಳ್ಳಿ ಶರ್ಮಾ ಜಿ, ಈ ಪ್ರಶಸ್ತಿಗೆ ನೀವೇ ಸೂಕ್ತ.

**ಆಯ್ದ ತಾಯ್ತನದ ಕಾಳಜಿಗೆ: ಗಾಂಧಾರಿ ಪ್ರಶಸ್ತಿ**

ಮುಂದಿನ ಪ್ರಶಸ್ತಿ, ವೆಂಕಟ್ ಕಣ್ಣಿಗೆ ಬಟ್ಟೆ ಕಟ್ಟಿದಂತಿದ್ದ ಇನ್ನೊಂದು ಪ್ರಶಸ್ತಿಯನ್ನು ಎತ್ತಿದರು, ತಮ್ಮ ಮುದ್ದಿನ ಕಂದಮ್ಮಗಳು ಏನೇ ಮಾಡಿದರೂ ಅವರು ನಿಷ್ಕಲ್ಮಶ ದೇವತೆಗಳೇ ಎಂದು ನಂಬಲು, ತಮ್ಮ ನೈತಿಕ ಕಣ್ಣುಗಳಿಗೆ ತಾವೇ ಬಟ್ಟೆ ಕಟ್ಟಿಕೊಂಡಿರುವ ತಾಯಿಗೆ ಈ ಗೌರವ.

ಈ ಗಾಂಧಾರಿ ಪ್ರಶಸ್ತಿಯು 601ರ ಶ್ರೀಮತಿ ಲಕ್ಷ್ಮಿ ಅವರಿಗೆ ಸಲ್ಲುತ್ತದೆ! ಇವರ ಮಗ ಆರ್ಯನ್, ಅಯ್ಯಂಗಾರ್ ಅವರ ಮನೆಯಂಗಳದಲ್ಲಿದ್ದ ಅಪರೂಪದ ಗಿಡದ ಕುಂಡಗಳಿಗೆ ಫುಟ್‌ಬಾಲ್‌ನಿಂದ ಜೋರಾಗಿ ಒದ್ದು, ಮೂರು ಮಣ್ಣಿನ ಕುಂಡಗಳನ್ನು ಪುಡಿಪುಡಿ ಮಾಡಿದಾಗ ಸಿಸಿಟಿವಿ ಸಾಕ್ಷಿ ತೋರಿಸಿದರೂ, ಇವರು ನನ್ನ ಮಗ ಹಾಗೆಲ್ಲಾ ಮಾಡಲ್ಲ, ಅವನು ದೇವಸ್ಥಾನದ ಹೂವಿದ್ದಂತೆ! ಎಂದು ಹೇಳಿದ್ದಕ್ಕಾಗಿ ಈ ಪ್ರಶಸ್ತಿ!

ಲಕ್ಷ್ಮಿ ಅವರ ಮುಖ ಸಣ್ಣದಾಯಿತು. ಅವನು ಆಟ ಅಭ್ಯಾಸ ಮಾಡ್ತಿದ್ದ! ಒಂದು ಮಗುವಿನ ಕ್ರೀಡಾ ಭವಿಷ್ಯಕ್ಕಿಂತ ಆ ಹೂವಿನ ಕುಂಡಗಳೇ ನಿಮ್ಗೆ ದೊಡ್ಡದಾಯ್ತಾ?

ಮಧ್ಯಾಹ್ನ 2 ಗಂಟೆಗೆ ಎಲ್ಲರೂ ವಿಶ್ರಮಿಸುವಾಗ ಆ ಕುಂಡಗಳ ಮೇಲೆ ಬಾಲ್ ಎಸೆದು ಗದ್ದಲ ಮಾಡುವುದು ಕ್ರೀಡಾ ಅಭ್ಯಾಸವಲ್ಲ ಲಕ್ಷ್ಮಿಯವರೇ, ವೆಂಕಟ್ ಪ್ರಶಾಂತವಾಗಿ ಉತ್ತರಿಸಿದರು. ನಿಮ್ಮ ಮಗ ಮನೆಯೊಳಗೇ ಆಟದ ಅಭ್ಯಾಸ ಮಾಡುವ ದಿನ ಬಂದಾಗ ನಿಮ್ಮ ಮನೆಯ ಶೋಪೀಸ್‌ಗಳು ಸುರಕ್ಷಿತವಾಗಿರುತ್ತವೆ ಎಂದು ಆಶಿಸುತ್ತೇನೆ!

**ಮಹೋನ್ನತ ನಿರ್ಲಕ್ಷ್ಯಕ್ಕೆ: ಭೀಷ್ಮ ಪ್ರಶಸ್ತಿ**

ಒಂದು ಸೊಸೈಟಿಯ ಅಭಿವೃದ್ಧಿ ಅದರ ನಾಯಕರ ಮೇಲಿರುತ್ತದೆ, ವೆಂಕಟ್ ದೊಡ್ಡ ಪ್ರಶಸ್ತಿಯ ಹತ್ತಿರ ಹೋದರು. ಈ ಪ್ರಶಸ್ತಿಯು ಯಾವುದೇ ಸಮಸ್ಯೆ ಬಂದರೂ ಸಂಪೂರ್ಣ ಮೌನ ವಹಿಸುತ್ತೇನೆ ಎಂದು ಭೀಷ್ಮ ಪ್ರತಿಜ್ಞೆ ಮಾಡಿರುವ ಆಡಳಿತ ಮಂಡಳಿಯ ಸದಸ್ಯರಿಗೆ ಸಲ್ಲುತ್ತದೆ.

ಎಲ್ಲರ ಕಣ್ಣುಗಳು ಕಾರ್ಯದರ್ಶಿ ಗೋಪಾಲನ್ ಅವರ ಕಡೆಗೆ ತಿರುಗಿದವು.

ಈ ಭೀಷ್ಮ ಪ್ರಶಸ್ತಿಯನ್ನು ನಮ್ಮ ಗೌರವಾನ್ವಿತ ಕಾರ್ಯದರ್ಶಿ ಶ್ರೀಮಾನ್ ಗೋಪಾಲನ್ ಅವರಿಗೆ ನೀಡುತ್ತಿದ್ದೇವೆ! ವಾಹನ ನಿಲ್ಲಿಸುವ ಜಾಗದಲ್ಲಿ ಮಕ್ಕಳು ಕ್ರಿಕೆಟ್ ಆಡಿ ಕಾರುಗಳ ಮೇಲೆ ಸಾಲು ಸಾಲು ಗೀರುಗಳನ್ನು ಹಾಗೂ ತಗ್ಗುಗಳನ್ನು ಹಾಕುತ್ತಿರುವ ಬಗ್ಗೆ ಬಂದ 87 ದೂರುಗಳನ್ನು ನೋಡಿಯೂ, ಕಣ್ಣಿದ್ದು ಕುರುಡರಂತೆ, ಕಿವಿ ಇದ್ದು ಕಿವುಡರಂತೆ ಮೌನವ್ರತ ಕಾಯ್ದುಕೊಂಡಿದ್ದಕ್ಕಾಗಿ! ಪಿತಾಮಹ, ನಿಮ್ಮ ಈ ಅಚಲ ನಿರ್ಲಕ್ಷ್ಯಕ್ಕೆ ನಮ್ಮದೊಂದು ನಮನ! ಏನ್ರಿ, ವೆಂಕಟ್ ಅವರೇ! ಗೋಪಾಲನ್ ಅವರ ಮುಖ ಕೆಂಪಗಾಯಿತು. ನಾನು... ನಾನು ನಿಯಮಾವಳಿಗಳನ್ನು ಪರಿಶೀಲನೆ ಮಾಡುತ್ತಿದ್ದೆ!

ಹದಿನಾಲ್ಕು ತಿಂಗಳಿಂದಾನೇ? ವೆಂಕಟ್ ಕೇಳಿದರು. ವಾಹ್, ಎಂತಾ ತ್ಯಾಗ!

**ಕುತಂತ್ರದ ಸೂತ್ರಧಾರನಿಗೆ: ಶಕುನಿ ಪ್ರಶಸ್ತಿ**

ಕೊನೆಯದಾಗಿ, ವೆಂಕಟ್ ಅವರ ಧ್ವನಿ ನಾಟಕೀಯವಾಗಿ ಕಡಿಮೆಯಾಯಿತು. ಇದು ಅತ್ಯಂತ ಪ್ರತಿಷ್ಠಿತ ಪ್ರಶಸ್ತಿ. ಪ್ರತಿಯೊಂದು ಸಮಸ್ಯೆಯನ್ನು ಪರಿಹರಿಸಲು ಹೋದಾಗ, ಅದನ್ನು ಎಂದಿಗೂ ಬಗೆಹರಿಯದಂತೆ ನೋಡಿಕೊಳ್ಳುವ ಮಹಾನ್ ಸೂತ್ರಧಾರನಿಗೆ!

ಅವರು ಅಂಗಳದ ಕೊನೆಯಲ್ಲಿದ್ದ ಒಬ್ಬರತ್ತ ಬೆರಳು ಮಾಡಿದರು.

ಈ ಶಕುನಿ ಪ್ರಶಸ್ತಿಯು 103ರ ಶ್ರೀಮಾನ್ ನಾಗರಾಜ್ ಅವರಿಗೆ ಸಲ್ಲುತ್ತದೆ! ವಸತಿ ಸಮುಚ್ಚಯದಲ್ಲಿ ಕಟ್ಟುನಿಟ್ಟಾದ ಕಾವಲುಗಾರನನ್ನು ಇಡೋಣ ಅಥವಾ ಸಂಜೆ 7 ಗಂಟೆಯ ನಂತರ ಗಲಾಟೆ ಮಾಡಬಾರದು ಎಂದು ನಿಯಮ ತರಲು ಹೊರಟಾಗಲೆಲ್ಲಾ, ಇವರು ಸಣ್ಣ ಮಕ್ಕಳ ಪೋಷಕರ ಹತ್ತಿರ ಹೋಗಿ ನೋಡಿ, ಆಡಳಿತ ಮಂಡಳಿಯವರು ನಮ್ಮ ಮನೆಯನ್ನು ಬಂದೀಖಾನೆಯಾಗಿ ಮಾಡಲು ಹೊರಟಿದ್ದಾರೆ ಎಂದು ಕಿವಿಯೂದಿ, ಜಗಳ ಶುರು ಮಾಡಿ, ಗೊಂದಲ ಎಂದಿಗೂ ತಣಿಯದಂತೆ ನೋಡಿಕೊಂಡಿದ್ದಕ್ಕಾಗಿ!

ಕೈಯಲ್ಲಿ ಬಿಸಿ ಬಿಸಿ ಬಜ್ಜಿಯಿಟ್ಟುಕೊಂಡು ನಿಂತಿದ್ದ ನಾಗರಾಜ್ ಕಂಗಾಲಾದರು. ನಾನು ಪ್ರಜಾಪ್ರಭುತ್ವದ ಪರವಾಗಿ ಮಾತನಾಡಿದೆ ಅಷ್ಟೇ!

ನೀವು ಕೇವಲ ದಾಳಗಳನ್ನು ಉರುಳಿಸುತ್ತೀರಿ ನಾಗರಾಜ್ ಅವರೇ, ವೆಂಕಟ್ ನಕ್ಕರು. ಅದರ ಪರಿಣಾಮವನ್ನು ನಾವೆಲ್ಲರೂ ಅನುಭವಿಸುತ್ತಿದ್ದೇವೆ.

**ಉಪಸಂಹಾರ**

ವೆಂಕಟ್ ತಮ್ಮ ಭಾಷಣದ ಪತ್ರವನ್ನು ಮಡಚಿ ಜೇಬಿಗಿಟ್ಟುಕೊಂಡರು, ಶಲ್ಯವನ್ನು ಸರಿಪಡಿಸಿಕೊಂಡು, ಎಲ್ಲರಿಗೂ ನಮಸ್ಕರಿಸಿದರು.

ಈ ಪ್ರಶಸ್ತಿಗಳು ಮುಂದಿನ ವಾರ್ಷಿಕ ಸಭೆಯವರೆಗೂ ಅಂಗಳದ ಪ್ರದರ್ಶನ ಪೆಟ್ಟಿಗೆಯಲ್ಲೇ ಇರುತ್ತವೆ. ಧನ್ಯವಾದಗಳು, ಕನಿಷ್ಠ ಪಕ್ಷ ಇನ್ಮೇಲಾದರೂ ಎಲ್ಲರಿಗೂ ಸ್ವಲ್ಪ ನಾಗರಿಕ ಪ್ರಜ್ಞೆ ಬರಲಿ ಎಂದು ಆಶಿಸುತ್ತೇನೆ.

ಅಷ್ಟೇ, ಅವರು ಅಲ್ಲಿಂದ ಹೊರಟು ಹೋದರು. ಅಂಗಳದಲ್ಲಿ ಎಂಥಾ ಮೌನ ಆವರಿಸಿತೆಂದರೆ, ಸಣ್ಣ ಸೂಜಿ ಬಿದ್ದರೂ ಸದ್ದು ಕೇಳಿಸುವಂತಿತ್ತು!

ಕಳೆದ ಐದು ವರ್ಷಗಳಲ್ಲಿ ಮೊದಲ ಬಾರಿಗೆ, ಕಾರಿಡಾರ್‌ನಲ್ಲಿ ಮಕ್ಕಳ ಚೀರಾಟ ಇರಲಿಲ್ಲ. ಶರ್ಮಾ ತಮ್ಮ ಮಗನಿಗೆ ಎಲಿವೇಟರ್ ಹತ್ತಿರ ನಿಂತು ಗದರಿಸುತ್ತಿದ್ದರು, ಲಕ್ಷ್ಮಿ ಮೆಲ್ಲನೆ ಒಡೆದುಹೋದ ಕುಂಡದ ಚೂರುಗಳನ್ನು ಬಾಚುತ್ತಿದ್ದರು, ಮತ್ತು ಕಾರ್ಯದರ್ಶಿ ಗೋಪಾಲನ್ ತಮ್ಮ ಫೋನ್‌ನಲ್ಲಿ ಹೊಸ ಶಿಸ್ತು ಮತ್ತು ಶಬ್ದ ನಿಯಂತ್ರಣದ ನಿಯಮಾವಳಿಗಳನ್ನು ಬರೆಯಲು ಶುರು ಮಾಡಿದ್ದರು.

ಅಕೌಂಟೆಂಟ್ ವೆಂಕಟ್ ತಮ್ಮ ಮನೆಗೆ ಹೋಗಿ, ಬಾಗಿಲು ಮುಚ್ಚಿ, ಕೊನೆಗೂ ಪ್ರಶಾಂತವಾಗಿ ಮಧ್ಯಾಹ್ನದ ನಿದ್ದೆಗೆ ಜಾರಿದರು.

**– ಶ್ರೀಕಾಂತ್** ಶ್ರೀನಿವಾಸ್

# ಚಿದಾನಂದ

ಹುಟ್ಟಿದ ಕೆಲವೇ ದಿನಗಳಲ್ಲಿ ವಿಧಿ ಅವನ ಎರಡೂ ಕಾಲುಗಳ ಮೇಲೆ ಬರೆ ಬರೆದಿತ್ತು. ಪೋಲಿಯೋ ಅವನ ಕಾಲುಗಳನ್ನು ಕಸಿದುಕೊಂಡಿತು. ಬಾಲ್ಯದಲ್ಲಿ ಎಲ್ಲರೂ ಓಡುತ್ತಿದ್ದರೆ, ಅವನು ದೂರದಲ್ಲಿ ಕುಳಿತು ನೋಡುತ್ತಿದ್ದ. ಕೆಲವೊಮ್ಮೆ ಮನಸ್ಸು ಕೇಳುತ್ತಿತ್ತು... ನಾನೇಕೆ ಹೀಗೆ? ಆ ಪ್ರಶ್ನೆಗೆ ಉತ್ತರ ಯಾರೂ ಕೊಡಲಿಲ್ಲ.

ಉತ್ತರ ಹುಡುಕಿದ. ದೇವರು ಕಾಲುಗಳನ್ನು ಕೊಡಲಿಲ್ಲ. ಆದರೆ ಯೋಚಿಸುವ ತಲೆ ಕೊಟ್ಟಿದ್ದಾನೆ. ಕೆಲಸ ಮಾಡುವ ಕೈ ಕೊಟ್ಟಿದ್ದಾನೆ. ಆ ದಿನದಿಂದ ಅವನು ತನ್ನ ನೋವಿನ ಬಗ್ಗೆ ಯೋಚಿಸುವುದನ್ನು ಬಿಟ್ಟು, ತನ್ನ ಸಾಮರ್ಥ್ಯದ ಬಗ್ಗೆ ಯೋಚಿಸಲು ಆರಂಭಿಸಿದ. ಕಾಲುಗಳು ನಡೆಯಲಿಲ್ಲ... ಆದರೆ ಆಲೋಚನೆಗಳು ಓಡಿದವು. ದೇಹ ಎದ್ದು ನಿಲ್ಲಲಿಲ್ಲ... ಆದರೆ ಆತ್ಮವಿಶ್ವಾಸ ಎತ್ತರಕ್ಕೆ ಏರಿತು. ವರ್ಷಗಳು ಕಳೆದವು. ಇಂದು ಅವನು ಒಂದು ಸಂಘಟನೆಯ ಅಧ್ಯಕ್ಷ. ಅವನು ಇನ್ನೂ ಕುಳಿತೇ ಇರುತ್ತಾನೆ. ಆದರೆ ಅವನ ಒಂದು ನಿರ್ಧಾರಕ್ಕೆ ಊರು ಎದ್ದು ನಿಲ್ಲುತ್ತದೆ. ಅವನು ಒಂದು ಮಾತು ಹೇಳಿದರೆ ನೂರಾರು ಕೈಗಳು ಕೆಲಸಕ್ಕೆ ಇಳಿಯುತ್ತವೆ. ಅವನ ಕಾಲುಗಳು ನಡೆಯಲಿಲ್ಲ... ಆದರೆ ಅವನ ಕನಸುಗಳು ಇಡೀ ಊರನ್ನು ನಡೆಯುವಂತೆ ಮಾಡಿವೆ.

**– ಧೀರಜ್** ಬೆಳ್ಳಾರೆ



